# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶಿವ ಪಂಚಾಕ್ಷರಿ ಮಹಿಮೆ

# (ಶ್ವೇತಕುಮಾರ ಚರಿತ್ರೆ)

ಕವಿ

## ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦

ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠೆ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಶಿವಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಎಮ್. ವೆಂಕಟ ರಾವ್, ಶ್ರೀ ನಿತ್ಯಾನಂದ ಗ್ರಂಥಾಲಯ, ಹಂಪನಕಟ್ಟಾ, ಮಂಗಳೂರು

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೭೧

**ಪಾತ್ರಗಳು:**

ರತ್ನಶೇಖರ, ವನಪಾಲಕರು, ಮಂತ್ರಿ, ಶಬರ, ಶ್ವೇತಕುಮಾರ, ನಾರದ, ಶೂರಸೇನ, ಶಿವೆ, ಕರಾಳಲೋಚನೆ, ದುರ್ಜಯ, ಕರಾಲನೇತ್ರ, ಸಿತಕೇತ, ತ್ರಿಲೋಕಸುಂದರಿ, ಪ್ರೇತ, ಚಿತ್ರಗುಪ್ತ, ಯಮ, ರಂಭೆ, ಈಶ್ವರ, ವೀರಭದ್ರ, ಮತ್ತಿತರರು.

**ಕಥಾಸಾರಾಂಶ:**

ರುದ್ರಪುರದ ರಾಜ ರತ್ನಶೇಖರನ ಮೃಗಬೇಟೆ. ಶಬರನೊಡನೆ ಯುದ್ಧ, ಸಾವು. ಮಗ ಶ್ವೇತಕುಮಾರನ ಪಟ್ಟಾಭಿಷೇಕ. ನಾರದರ ಸೂಚನೆಯಂತೆ ಕಾಶೀರಾಜ ಶೂರಸೇನನ ಮಗಳು ಶಿವೆಯೊಂದಿಗೆ ವಿವಾಹವಾಗಿ ಬರುವಾಗ ಕರಾಳಲೋಚನೆ ಎಂಬ ರಾಕ್ಷಸಿಯನ್ನು ಸೋಲಿಸಿ ಕರಭಂಗ. ರುದ್ರಪುರಕ್ಕೆ ಬಂದು ವನವಿಹಾರ. ಅಲ್ಲಿ ತ್ರಿಲೋಕಸುಂದರಿಯೊಡನೆ ವಾಸ. ಕರಾಳಲೋಚನೆ ಅಣ್ಣ ದುರ್ಜಯನಲ್ಲಿ ದೂರಿದಾಗ ಅವನು ರುದ್ರಪುರಕ್ಕೆ ದಾಳಿ. ಯುದ್ಧದಲ್ಲಿ ಗೆದ್ದು ಶಿವೆಯ ಬಲತ್ಕಾರ. ನಾರದರಿಂದ ವಿಷಯ ತಿಳಿದು ಬಂದ ಶ್ವೇತಕುಮಾರ ಯುದ್ಧದಲ್ಲಿ ಶಿವೆ ಯೆನ್ನುತ್ತಾ ಮರಣ ಪ್ರೇತವಾಗಿ ಯಮನಲ್ಲಿಗೆ ಹೋದಾಗ ಒಂದು ದಿನ ರಂಭೆಯ ಭೋಗಕ್ಕೆ ಬೇಡಿಕೆ. ರಂಭೆಯಿಂದ ಪಂಚಾಕ್ಷರಿ ಉಪದೇಶ. ಕರೆಯಲು ಬಂದ ಯಮನಿಗೂ, ಒಲಿದು ಬಂದ ಹರನಿಗೂ ಯುದ್ಧ. ಹರನಿಂದ ಶ್ವೇತಕುಮಾರನಿಗೆ ಪುನರ್ಜನ್ಮ. ದುರ್ಜಯನೊಡನೆ ಯುದ್ಧಮಾಡಿ ಅವನನ್ನು ಕೊಂದು ಪುನಹ ರಾಜ್ಯವಶ, ಮಂಗಲ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರವರು ಕಾಸರಗೋಡು ತಾಲೂಕಿನ ಕುಂಬ್ಡಾಜೆ ಗ್ರಾಮದವರು. ಇವರ ಕಾಲ ೧೯೧೩ – ೧೯೮೬. ತಂದೆ ಕೇಶವ ಭಟ್ಟ ಮತ್ತು ತಾಯಿ ಲಕ್ಷ್ಮಿ. ಕಾದಂಬರಿ, ಕಾವ್ಯ, ಆತ್ಮಕಥೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಶ್ರೀಯುತರು ನಮ್ಮ ನಾಡಿನ ಖ್ಯಾತ ಯಕ್ಷಗಾನ ಅರ್ಥಧಾರಿಗಳು ಹೇಗೋ, ಹಾಗೆಯೇ ಖ್ಯಾತ ಯಕ್ಷಗಾನ ಕವಿಗಳು ಕೂಡ. ಯಕ್ಷಗಾನ ಅರ್ಥಗಾರಿಕೆಯಲ್ಲಿ ಶೇಣಿ ಶೈಲಿ, ದೇರಾಜೆ ಶೈಲಿ ಎಂದೆಲ್ಲ ನಾವು ಗುರುತಿಸುವ ಹಾಗೆ ಕೀರಿಕ್ಕಾಡು ಮಾಸ್ತರ್ ಶೈಲಿಯನ್ನೂ ಪ್ರತ್ಯೇಕವಾಗಿ ಗುರುತಿಸಬಹುದು. ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರು ಸೇರಿದಂತೆ ಅವರ ಶಿಷ್ಯರನೇಕರು ಇಂದು ಯಕ್ಷರಂಗಭೂಮಿಯಲ್ಲಿ ಉತ್ತಮ ಕಲಾವಿದರಾಗಿ ವಿಜೃಂಭಿಸುತ್ತಿದ್ದಾರೆ.

ಅವರು ಯಕ್ಷಗಾನದ ಆಶುಕವಿಗಳು. ಪ್ರಸಂಗ ರಚನೆಯ ಮಟ್ಟಿಗೆ ಅವರದು ಗಿನ್ನಿಸ್ ದಾಖಲೆಯೆಂದರೂ ತಪ್ಪಾಗಲಾರದು.

ಇವರು ಬರೆದ ಪ್ರಸಂಗಗಳು: ಅಂಬಾಲಿಕಾ, ಅಂಬಿಕಾ ಮಹಾತ್ಮೆ (ದುರ್ಗಾ ಮಹಾತ್ಮೆ), ಅಮೋಘ ವರ್ಷ ನೃಪತುಂಗ, ಅಶೋಕ ಸುಂದರಿ, ಅಶ್ರುಬಿಂದುಮತಿ, ಅಷ್ಟಾಕ್ಷರೀ ಮಹಿಮೆ (ರತ್ನಗ್ರೀವ), ಇಂದ್ರೋತ್ಕರ್ಷ, ಇಕ್ಷ್ವಾಕು ವಿಜಯ, ಊರ್ವಶಿ ಪುರೂರವ, ಏಕವೀರ ಏಕಾವಳಿ, ಕಂಜಾಕ್ಷಿ ಕಲ್ಯಾಣ, ಕಂದುಕಾವತಿ, ಕಚೋಪಖ್ಯಾನ, ಕನಕಲೇಖಾ, ಕರ್ಣಾವಸಾನ, ಕಲ್ಪಸುಂದರಿ ಕಲ್ಯಾಣ (ಉಪಾಹಾರವರ್ಮ ವಿಜಯ), ಕಾಮೋದೆ, ಕಾಲನೇಮಿ ಕಾಳಗ, ಕಾಲಯವನ ಕಾಳಗ, ಕುಲಬಾಲಿಕಾ, ಕುಶಲವ, ಕ್ಷೇಮಂಕರೀ ದೇವಿ ಮಹಿಮೆ, ಗಜಾಸುರ ಮೋಕ್ಷ, ಗೋಕರ್ಣ ಕ್ಷೇತ್ರ ಮಹಾತ್ಮೆ, ಗೌತಮ ವಿಜಯ, ಚಂದ್ರಪ್ರಭಾ ಪರಿಣಯ, ಚಂದ್ರಸೇನಚಿಂತಾಮಣಿ, ಚಂದ್ರಹಾಸ, ಜಯಸಿಂಹ ವಿಜಯ, ಜರಾಸಂಧ ಪರಾಭವ, ಜಾನಘ ಚರಿತ್ರೆ, ದುರ್ಗಾ ಮಹಿಮೆ (ಅಂಬಿಕಾ ಮಹಾತ್ಮೆ), ದುರ್ಜಯೋಪಖ್ಯಾನ, ದೂಷಣಾಸುರ ಕಾಳಗ, ನವಮಾಲಿಕಾಪರಿಣಯ, ಪಂಚಾಕ್ಷರಿ ಮಹಾತ್ಮೆ, ಪಾಂಚಜನ್ಯ, ಪುಷ್ಪವೇಣಿ ಕಲ್ಯಾಣ, ಪುಷ್ಪೋದ್ಭವ, ಪ್ರದೋಷ ವ್ರತ ಮಹಾತ್ಮೆ, ಪ್ರಭಾವತಿ ಪರಿಣಯ, ಬಭ್ರುವಾಹನ, ಬಾಲಚಂದ್ರಿಕಾ, ಬ್ರಹ್ಮ ಯಜ್ಞ (ಗಾಯತ್ರಿ ಮಹಿಮೆ) (ಗಾಯತ್ರಿ ಪರಿಣಯ), ಭಕ್ತ ಪ್ರಹ್ಲಾದ, ಭಕ್ತ ಸುಬಾಹು, ಭಕ್ತ ಸುಮದ (ಶ್ರೀ ರಾಮಾಶ್ವಮೇಧದ ಭಕ್ತ ಸುಮದ), ಭಕ್ತ ಸುರಥ, ಭಾನುಮತಿ ಪರಿಣಯ, ಭೀಮಶಂಕರ ಮಹಿಮೆ, ಭ್ರಮರಕುಂತಳೆ ಕಲ್ಯಾಣ, ಭ್ರಮರವೇಣಿ ಸ್ವಯಂವರ, ಮಂಜುವಾಹಿನಿ, ಮಣಿಕರ್ಣಿಕಾ, ಮಣಿಪ್ರಭಾ ಪರಿಣಯ, ಮದ್ಯೋಚ್ಚಾಟನ, ಮಿತ್ರಗುಪ್ತ ವಿಜಯ, ಮೃಗಾವತಿ ಪರಿಣಯ (ವೀರ ಸಹಸ್ರಾನಿಕ), ರಕ್ಷರತ್ನಾಹಾರ (ಹರಿರತ್ನಹಾರ), ರಕ್ಷಾಕವಚ (ತುಳಸಿ ಶಂಖಚೂಡ), ರಕ್ಷಾಮಣಿ (ದುರ್ಜಯೋಪಖ್ಯಾನ), ರಘುನಾಥ ವಿಜಯ, ರಜಿಯಾಭ್ಯುದಯ, ರಣಮಲ್ಲವಿಜಯ, ರತ್ನ ಪ್ರಭಾ, ರಾಜಹಂಸ ಪರಾಜಯ (ರಾಜವಾಹನ ವಿಜಯ), ರಾಜಹಂಸ ವಿಜಯ, ರಾಜಾ ಸುದರ್ಶನ, ರಾಜೇಯ ಪರಾಜಯ, ರುಕ್ಮಾವತೀ ಕಲ್ಯಾಣ, ವಾಮಲೋಚನೆ, ವಿಶ್ರುತ ವಿಜಯ, ವೀರ ಅಭಿಮನ್ಯು, ವೀರ ಬಭ್ರುವಾಹನ, ವೀರ ವಜ್ರಾಂಗ, ವೀರಮಣಿ, ವೀರಮಣಿ ಕಾಳಗ, ವೀರರಮಣಿ, ವೀರೇಶ್ವರ, ವ್ಯಾಘ್ರಾಸುರ ಕಾಳಗ (ವ್ಯಾಘ್ರಾಸುರ ಮೋಕ್ಷ), ಶಿವ ಕವಚ, ಶಿವನಾಮ ಮಹಿಮೆ (ಶಿವಭಕ್ತ ಸುಪ್ರಿಯ), ಶಿವಪಂಚಾಕ್ಷರಿ ಮಹಾತ್ಮೆ (ಶ್ವೇತಕುಮಾರ ಮಹಿಮೆ), ಶಿವಮಂತ್ರ ಮಹಿಮೆ (ದಾಶಾರ್ಹ ಚರಿತೆ), ಶುಭಾಂಗಿ, ಶೃಗಾಲ ಕಾಳಗ, ಶ್ರೀಮತೀ ಪರಿಣಯ (ಸಹಸ್ರಕಂಠ ರಾವಣ), ಶ್ರೀರಾಮಪಟ್ಟಾಭಿಷೇಕ, ಷಟ್ಪುರ ಮಥನ, ಸಾಹಸಚಂದ್ರ, ಸಾಹಾಸಾಂಬ, ಸೀತಾ ಪರಿತ್ಯಾಗ, ಸೀತಾಪಹಾರ, ಸೀತಾರಾಮವಿಜಯ, ಸೀತಾವಿಜಯ, ಸೀಮಂತಿನೀ ಕಲ್ಯಾಣ, ಸುಮದಾಖ್ಯಾನ, ಸುಲೋಚನಾ ಸ್ವಯಂವರ, ಸೊಲಗಾವಸಾನ, ಸೋಮದತ್ತ ವಿಜಯ, ಸ್ವಯಂಪ್ರಭಾ ಪರಿಣಯ, ಸ್ವಾಮಿನಿಷ್ಠ ಏಚ್ಚಮ, ಹೇತ್ರ ಪ್ರಹೇತ್ರ

**ಟಿಪ್ಪಣಿ** :

ಬಡಗು ಹಾಗೂ ತೆಂಕುತಿಟ್ಟಿನಲ್ಲಿ ಅತಿ ಹೆಚ್ಚು ಪ್ರದರ್ಶನಗೊಳ್ಳುತ್ತದೆ

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀಲಕ್ಷ್ಮೀರಮಣಂ ಸರೋಜನಯನಂ ಶ್ರೀ ವಿಶ್ವನಾಥಂ ಹರಿಂ ||
ಬಾಲಾರ್ಕಾಮಿತ ಶೋಭಿತೋಜ್ವಲಕರಂ ಭಾಗಿರಥೀ ಸೇವಿತಂ ||
ಕಾಲಗ್ರೀವಸಖಂ ಕಲಾಮಯಸುಖಂ ಕಾರುಣ್ಯಕಲ್ಪದ್ರುಮಂ ||
ಲೀಲಾನಾಟಕಸೂತ್ರಧಾರಮಮಲಂ ಗೋಪಾಲಕೃಷ್ಣಂ ಭಜೇ || 1 ||

**ನಾಟಿ - ರೂಪಕ**
ಭಜಿಸುವೆ ಶ್ರೀಗಣನಾಯಕ | ಗಜಮುಖ ಸಿದ್ಧಿವಿನಾಯಕ |
ರಜತಗಿರೀಶನ ಬಾಲಕ | ತ್ರಿಜಗದೊಡೆಯ ಬೆನಕ || 2 ||

ಅಂಬರಮಣಿ ಶತರಾಜಿತ | ತುಂಬುರ ನಾರದ ಪೂಜಿತ |
ನಂಬಿದ ಭಕ್ತಸುಪೋಷಿತ | ಕುಂಬಿಡುವೆನು ಸತತ || 3 ||

ಸದಮಲಮಂಗಲಮೂರುತಿ | ಬುಧಕುಲಸನ್ನುತಕೀರುತಿ |
ಮಧುಪುರಸ್ಫೂರ ನಿನಗಾರತಿ ಬೆಳಗುತ ಗೈವೆ ಕೃತಿ || 4 ||

**ಸುರುಟಿ - ಏಕ**
ಅನ್ನಪೂರ್ಣೇಶ್ವರಿಯೇ | ರಕ್ಷಿಪು |
ದನ್ನಪೂರ್ಣೇಶ್ವರಿಯೇ ||
ಪುಣ್ಯಶ್ಲೋಕರಿ | ಗುನ್ನತಪದವಿಯ |
ಮನ್ನಿಸುತೀವ ಪ್ರ | ಸನ್ನಳೆ ಜಯ ಜಯ || 5 ||

ಮಾತೆ ಮಂಗಲದಾತೆ | ಸಜ್ಜನ |
ವ್ರಾತವಿನುತೆ ಖ್ಯಾತೆ ||
ಭೀತಿರಹಿತೆ ಗಿರಿ | ಜಾತೆ ಸುರಾರ್ಜಿತೆ |
ಪಾತಕಹರೆ ಖ | ದ್ಯೋತಪ್ರಕಾಶಿನಿ || 6 ||

ಪಾಡುವೆ ನಾ ನಿರತಾ | ಯೆರೆಯ |
ಪ್ಪಾಡಿಯೊಳ್ನೀನಿರುತಾ ||
ಪಾಡಿ ನುತಿಸಿ ಕೊಂ | ಡಾಡುವ ಭಕ್ತರು |
ಬೇಡುವಭೀಷ್ಟವ ನೀಡುವ ದೇವಿಯೆ || 7 ||

**ಶಂಕರಾಭರಣ - ತ್ರಿವುಡೆ**
ಶರಣು ಜಯ ಶ್ರೀ ವಿಶ್ವನಾಥನೆ |
ಶರಣು ಮಂಗಲದಾತನೇ ||
ಶರಣು ಸುಜನಕುಲೈಕಪೋಷನೆ |
ಶರಣು ತ್ರೈಜಗದೀಶನೇ | ಶರಣು ಶರಣು || 8 ||

ಆದಿ ಬ್ರಹ್ಮಾನಂದ ಮೂರುತಿ |
ವೇದವಂದಿತ ಸದ್ಗತೀ ||
ಪಾದಕಮಲವ ನಂಬಿದವರಿಗೆ |
ಹಾದಿ ನೀನೇ ತೋರುತೀ | ಶರಣು ಶರಣು || 9 ||

ದೋಷಹರ ವರ ಕೇಶವಾರ್ಚಿತ |
ವಾಸುಕೀ ಸದ್ಭೂಷಿತ ||
ಪೋಷಿಸೆನ್ನನು ಸತತ ಕಾಶೀ |
ವಾಸ ನೀ ದಯಮಾಡುತ | ಶರಣು ಶರಣು || 10 ||

**ಭಾಮಿನಿ**
ಲೋಕಗುರು ಕೇಶವನಿಗೆರಗಿ ಪಿ |
ನಾಕಿಯಬುಜಭವಾದಿ ಪುಣ್ಯ |
ಶ್ಲೋಕರನು ಕೊಂಡಾಡಿ ಲಕ್ಷ್ಮೀದೇವಿಯನು ಸ್ಮರಿಸೀ ||
ಪಾಕಶಾಸನ ಮುಖ್ಯ ಸಕಲ ದಿ |
ವೌಕಸರ ಪ್ರಾರ್ಥಿಸುತ ಕವಿ ವಾ |
ಲ್ಮೀಕಿ ವ್ಯಾಸರ ನೆನೆದು ಪೇಳುವೆನೀ ಕಥಾಮೃತವಾ || 11 ||

**ಸೌರಾಷ್ಟ್ರ - ತ್ರಿವುಡೆ**
ಶ್ರೀಮದುತ್ತಮ ಶಿವಪುರಾಣವ |
ನಾ ಮಹಾ ಶೌನಕರಿಗೊಲವಿಂ |
ನೈಮಿಶಾರಣ್ಯದಲಿ ಸೂತನು | ಪ್ರೇಮದಿಂದ || 12 ||

ಉಸುರುತಿರೆ ಪಂಚಾಕ್ಷರಿಯ ಜಪ |
ದೊಸಗೆಯಿಂದಲಿ ಶ್ವೇತಕುವರನು |
ಪೊಸತೆನಿಸಿ ಜೀವಿಸಿದನೆಂತೆನೆ | ಋಷಿಗಳೆಲ್ಲ || 13 ||

ಸುಗುಣನಿಧಿಗಳ ಪ್ರಶ್ನೆಯನು ಕೇ |
ಳ್ದಗಣಿತಾನಂದದಲಿ ಸೂತನು |
ನಗುತ ವಿಶ್ವೇಶ್ವರಗೆ ತಾ ಕೈ | ಮುಗಿಯುತೆಂದ || 14 ||

**ಭಾಮಿನಿ**
ಋಷಿವರರು ಲಾಲಿಪುದು ಹಿಂದಕೆ |
ವಸುಮತೀ ಸೀಮಂತಮಣಿಯೋ |
ಲೆಸವ ರುದ್ರಪುರಾಖ್ಯನಗರವನಧಿಕ ವೈಭವದೀ ||
ಕುಶಲಮತಿ ವರ ರತ್ನಶೇಖರ |
ನೊಸಗೆಯಿಂದಾಳುತ್ತಲಿರುತಿರ |
ಲಸಮಬಲನೋಲಗವನಿತ್ತನು ಸಭೆಯೊಳೊಂದಿವಸಾ || 15 ||

**ಭೈರವಿ - ಝಂಪೆ**
ಸುರಪನಾಸ್ಥಾನದೈ | ಸಿರಿಗೆಂಟುಮಡಿ ಮಿಗಿಲು |
ಮೆರೆಯೆ ಸಭೆ ಸಚಿವಗಿಂ | ತೊರೆದನಾ ನೃಪನು || 16 ||

ಮಂತ್ರೀಶ ಕೇಳು ಬಿರಿ | ದಾಂತ ನಮ್ಮಾಳ್ವಿಕೆಯು |
ಕಂತುಹರನೊಲುಮೆಯಲಿ | ಕಾಂತಿ ಪೆರ್ಚಿದುದು || 17 ||

ಅಷ್ಟ ಸೌಭಾಗ್ಯದೊಳು | ದಿಟ್ಟತನ ಶೌರ್ಯದೊಳು |
ಸೃಷ್ಟಿಯಲಿ ನಮ್ಮ ಸರಿ | ಗಟ್ಟುವವರಿಹರೇ || 18 ||

ವೀರ ಸುಕುಮಾರ ಗಂ | ಭೀರ ಶ್ವೇತಕುಮಾರ |
ನೀ ರಸೆಗೆ ಜಿತಮಾರ | ಸಾರ ಗುಣಹಾರ || 19 ||

ಸಚಿವಮಣಿಬಿಂಬ ನೀ | ಪ್ರಚುರ ಪ್ರಭು ಭಕ್ತಿಯಲಿ |
ಶುಚಿಗಳೆಲ್ಲರು ಪ್ರಜೆಗ | ಳಚಲ ನಿಷ್ಠೆಯಲೀ || 20 ||

ಧನ್ಯನಾದೆನು ಮುಂದ | ಕಿನ್ನೆಂತೊ ಹರ ಬಲ್ಲ |
ನೆನ್ನುತಿರೆ ವನಪಾಲ | ಬಣ್ಣಿಸಿದ ಬಂದು || 21 ||

**ಮುಖಾರಿ - ಏಕ**

ರಾಜಾಧಿರಾಜ ಪರಾಕೂ | ಲಾಲಿಸಬೇಕು |
ರಾಜಾಧಿರಾಜ ಪರಾಕೂ | ರಾಜಿಪ ವನಸಿರಿ |
ರಾಜಿಯನುಳಿಸಿರಿ | ಮಾಜಿಪ ಮೃಗಗಳ | ಗೋಜಿಯನಳಿಸಿರಿ || ಪ ||
ಸೊಕ್ಕಿದ ಕರಿ ಹರಿ | ಯೆಕ್ಕಲಗಳು ಹರಿ |
ದಿಕ್ಕುವವವನೆಂ | ದೊಕ್ಕಣಿಸಲಿ ಪ್ರಭೋ || ರಾಜಾ || 22 ||

ದಟ್ಟಣಿ ಸಮಗಳ ಮೆಟ್ಟುವ ಕ್ರಮಗಳ |
ದಿಟ್ಟಿಸಲಾರ್ಗಳ | ದಿಟ್ಟ ಪ್ರಬಲ ಬಲ || 23 ||

ಹಾರುವ ಮೃಗ ಪರಿ | ವಾರ ತರಿಯೆ ಸ |
ವಾರಿ ಚಿತ್ತೈಪುದು | ಬೇರೇನೆನ್ನಲಿ || 24 ||

**ಭಾಮಿನಿ**

ಸಾಕು ಬಿಡು ಭಯ ಬೇಡ ಮೃಗಗಳ |
ಝೋಕ ನೋಡುವೆನೊಮ್ಮೆ ಬೇಟೆಯ |
ಠೀಕೆಗೇಳದೆ ಸಂತು ಕೆಲದಿನವಡೆರಿತೇ ಮದವೂ ||
ಯಾಕೆ ತಡ ಸಚಿವೇಂದ್ರ ಪೊರಡುವ |
ದಾಕಡೆಗೆ ನಾವೆನುತ ನೃಪಕುಲ |
ಶೇಖರನು ಬಲ ಸಹಿತ ಪೊರಟನು ಬೇಟೆಗುತ್ಸವದೀ || 25 ||

**ಸಾರಂಗ - ಏಕ**

ಬೇಟೆಯಾಡುತ್ತ ಬಂದ ಭೂಪಾ | ಬಾಹುಪ್ರತಾಪಾ |
ಬೇಟೆಯಾಡುತ್ತ ಬಂದ ಭೂಪಾ || ಪ ||
ಈಟಿ ಕಠಾರಿ ಬಿ | ಲ್ಲಾಟದ ಪ್ರೌಢರು |
ಸೂಟಿಯೊಳಗೆ ಮೃಗ | ಕೂಟವ ತರಿಯುತ || 26 ||

ಮತ್ತಗಜಂಗಳ | ಮೊತ್ತವ ಸವರುತ |
ಕತ್ತರಿಸುತ ತಲೆ | ಯೆತ್ತುವ ಹರಿಣಗಳ || 27 ||

ಅದೊ ದುರ್ಮದ ಹುಲಿ | ಯೊದಗಿತಧಿಕ ಬಲಿ |
ತುದು ಸದೆಯಿರಿಯಿರಿ | ತದೊಳೆನ್ನುತಲಿ || 28 ||

**ವಾರ್ಧಕ**

ಚಿತ್ತವಿಸಿ ಮುನಿವರರು ವಿಧಿ ವಿಲಾಸವನೆಂತು |
ಬಿತ್ತರಿಪೆನೀ ತೆರದಿ ರತ್ನಶೇಖರ ನೃಪತಿ |
ಯುತ್ಸಹದಿ ಬೇಟೆಯಾನ್ನಡುತಿರಲೊಂದು ಸೂಕರವೆದ್ದುದಾರ್ಭಟಿಸುತ ||
ಪೃಥ್ವೀಶನದ ಕಂಡು ಸಚಿವ ಸಹ ಬೆಂಬೊತ್ತೆ |
ಕತ್ತಲೆಗೆ ನೆಲೆವೀಡದೆಂಬೊಂದು ಕಾನನ |
ಕ್ಕತ್ತಿತ್ತ ಕೊಂಡೊಯ್ಯೆ ಭೂವರಂ ಕೋಪದೊಳು ಗುರಿಯಿಟ್ಟು ಶರವೆಸೆಯಲು || 29 ||

**ಭಾಮಿನಿ**
ಆ ಶರದ ಹತಿಯಿಂದ ಸೂಕರ |
ಘಾಸಿಗೊಂಡಾ ಸಮಯದಲ್ಲಿ ವಿ |
ಶೇಷ ಬೇಟೆಯನಾಡಿ ದಣಿವಾರಿಸಲು ಕುಳಿತಿರ್ಪ ||
ವಾಸವರಣ್ಯೇಶ ಶ್ವೇತಪ್ರ |
ಕಾಸನೆಂಬ ಕಿರಾತನೆಡೆಗಾ |
ವೇಶದಿಂ ಬರಲಂಬನೆಚ್ಚದ ಕೆಡಹಿದನು ಧರೆಗೆ || 30 ||

**ಕಂದ ಪದ್ಯ**
ಬಂದನಿತರೊಳಾ ನೃಪನು |
ನಿಂದೀಕ್ಷಿಸುತಾ ಕರಾಳ ಪಂದಿಯ ಬಗೆಯಂ ||
ಮುಂದಿಹ ಶಬರನಿದಾರೆಂ |
ಬಂದವನರಿಯದಿರಲೆಂದನಾ ಸಿತಶೋಭಂ || 31 ||

**ಕಾಂಭೋದಿ - ಝಂಪೆ**
ಯಾರಯ್ಯ ಧರಣೇಂದ್ರ | ಸ್ವಾರಿಯೆಲ್ಲಿಗಿದೇನ |
ನೀ ರೀತಿಯಿಂದ ಪರಿಕಿಸುವೆ ||
ಘೋರ ಕಿಟಿಯಿದು ಗರ್ವ | ಮಿರಿ ಬಂದೆನ್ನ ಮೇ |
ಲೇರುತಿರಲೆಚ್ಚು ಕೆಡಹಿದೆನು || 32 ||

ಧರಣಿಯೊಳು ರುದ್ರಪುರ | ದರಸನಹ ರತ್ನಶೇ |
ಖರನೆಂಬರೆನ್ನ ನಾನಿತ್ತ ||
ವರಗಿದೀ ಸೂಕರವ | ತರಿಯಲಟ್ಟುತ ಬಂದು |
ಶರವೆಸೆಯಲಾಯಿತದಕಿಂತು || 33 ||

ಕ್ಷೋಣೀಶನಂತೆ ನೀ | ನೆಂಬುದರರೆ ತರಿ |
ದಾನಿದರ ಮಡುಹಿರ್ಪನೀಗ ||
ಹೀನ ಪುಸಿವಾಣಿಯಿಂ | ಮಾನವನು ಕಳೆಯೆ ಬಹು |
ಮಾನವೇ ರತ್ನಶೇಖರನೇ || 34 ||

ಮಿಥ್ಯವಚನವಿದಲ್ಲ | ಸುತ್ತುತಿದಕಾಗಿ ಬೆಂ |
ಬೊತ್ತಿದೆವು ನಾವೀರ್ವರಿಂದು ||
ಮುತ್ತಿದ್ದ ಸಚಿವನಿವ | ಸತ್ಯವರಿತನು ಕಿಟಿಯು |
ಸತ್ತುದೆನ್ನಿಂದಾತ್ಮಸಾಕ್ಷಿ || 35 ||

**ಶಂಕರಾಭರಣ - ಮಟ್ಟೆ**
ಭಳಿರೆ ನೃಪನೆ ನಿನ್ನ ಸಚಿವ |
ತಿಳಿವ ಸತ್ಯವೆಂಬರೆನ್ನ |
ಬಲವ ಕೇಳು ಪೇಳ್ವರಾನೆ | ಮುಳಿದು ಕೊಂದುದ || 36 ||

ಬೇಡ ವಾದ ಬರಿದೆ ನಮಗೆ |
ಬೇಡ ನೀ ವಿಚಾರವರಿದು |
ಕ್ರೋಧವನ್ನು ಬಿಡುವುದೊಳ್ಳಿ | ತಾಡಿ ಕೆಡದಿರು || 37 ||

ಕೆಡಿಪರ್ಯಾರು ಹೆಮ್ಮೆ ಮಾತ |
ನುಡಿಯಬೇಡ ಕಿಟಿಯ ಕೊಡಲು |
ಬಿಡಲು ನೀನು ಕೊಟ್ಟುದಲ್ಲ | ನಡಿಯೊ ಸುಮ್ಮನೆ || 38 ||

ಹಂದೆ ಶಬರ ಗರ್ವವ್ಯಾಕೆ |
ಹಂದಿಯನ್ನು ಕೊಡದಿರಲ್ಕೆ |
ಕೊಂದು ಕೆಡಹದಿರೆನು ಪ್ರಬಲ | ನೆಂದು ತಿಳಿದುಕೊ || 39 ||

ಗೆಲುವ ಕೊಲುವ ಭಟನೆ ನೀನು |
ಹುಲು ಕಿರಾತನೆಂದು ತಿಳಿದು |
ಗಳಹ ಬೇಡ ಹರನೆ ಬರಲು | ಛಲದೆ ಸೆಣಸುವೆ || 40 ||

**ಮಾರವಿ - ಏಕ**

ಮೃಡನನು ಗೆಲ್ಲುವ | ದಡಿಗನೆ ಬಿಡು ಬಿಡು |
ಬಡಿವಾರವದ್ಯಾಕೆ ||
ಕಡೆಗಾಲವು ನಿನ | ಗಡಸಿತು ನೋಡೆಂ |
ದೊಡನೆಚ್ಚನು ಶರವ || 41 ||

ಬಿಟ್ಟ ಶರವ ಕಡಿ | ದೊಟ್ಟಲು ನಿಮಿಷದೊ |
ಳಿಟ್ಟನು ಗಿರಿಶರವ ||
ದಿಟ್ಟನು ವಜ್ರದಿ | ಕುಟ್ಟುತಾಲಕ್ಷಣ |
ಬೆಟ್ಟವ ಪುಡಿಗೈಯ್ಯೆ || 42 ||

ಅನಿತರೊಳಾ ನೃಪ | ನನಿಲಾಸ್ತ್ರವ ಬಿಡೆ |
ಫಣಿಶರದೊಳು ಗೆಲಲು ||
ಅನಲಕಳಂಬವ | ನನುಗೊಳಿಸಲು ತರಿ |
ದನು ಜಲಬಾಣದಲಿ || 43 ||

**ಭಾಮಿನಿ**

ಇಂತು ನಾನಾ ಸಾಯಕಂಗಳ |
ನಾಂತು ಹೊಯ್ದಾಡುತಿರೆ ಶಬರ ಮ |
ಹಾಂತ ವಿಕ್ರಮದಿಂದ ಗೆಲಿದೆಲ್ಲವನು ಕೋಪದಲಿ ||
ಕಂತುಹರನೆನೆ ಕೆರಳುತಾಗಲ |
ನಂತಶಕ್ತಿಯ ಬಿಡಲು ನೃಪಗದ |
ನೆಂತು ಪೇಳಲಿ ರತ್ನಶೇಖರನಳಿದ ವಿಧಿವಶದೀ || 44 ||

**ಕಂದ ಪದ್ಯ**

ಬಿದ್ದಾ ನೃಪತಿಯ ಕಾಣುತ |
ಲಿದ್ದಾ ಸಚಿವನು ವಿಶಾದ ಮನದಿಂದಾಗಳ್ ||
ರುದ್ರಪುರೇಶನೆ ಹಾ ಹಾ |
ಯುದ್ಧದಿ ಮಡಿದೆಯಾಯೆನುತಳಲಿದ ಕಳೆಗುಂದಿಂ || 45 ||

**ಆನಂದಭೈರವಿ - ಏಕ**

ಹಾ ಪ್ರಭೋ ಇನ್ನೇನು ಗತಿಯು |
ಸುಪ್ರತಾಪ ನಮ್ಮನಗಲಿ | ಪೋದೆಯಾ | ಯಿಂ | ತಾದೆಯಾ || 46 ||

ಹುಲು ಕಿರಾತ ನಿನ್ನನಿಂತು |
ಕೋಲುವದೆಂದಡೇನ್ವಿಚಿತ್ರ | ತರವಿದು | ಎಂ | ತೊರೆವುದು || 47 ||

ಸಚಿವನೊಡನದೊಂದು ಪ್ರೇಮ |
ವಚನವಾಡಲಾರೆ ನೃ | ಪಾಲನೇ | ಸುಗುಣ | ಶೀಲನೆ || 48 ||

**ಭಾಮಿನಿ**
ಯಾಕೆ ಮರುಗುವೆ ಮಂತ್ರಿ ಬರಿದೆ ವಿ |
ವೇಕವಿಲ್ಲವೆ ನಿನಗೆ ಯುದ್ಧದೊ |
ಳಾಕೆವಾಳರಿಗೊದಗೆ ಮರಣವು ವೀರ ಸ್ವರ್ಗವದೂ ||
ಸೂಕರದ ನೆವದಿಂದಲೆನ್ನಳು |
ಪೋಕತನದಿಂದಳಿದ ನಡೆ ನಡೆ |
ಸಾಕು ದುಃಖಿಸದೆನಲು ಶಬರನು ಯೋಚಿಸುತ ಸಚಿವ || 49 ||

**ಆರ್ಯ ಸವಾಯ್**
ಖಳನಾದರು ನುಡಿ | ಯೊಳು ತಿಳಿವಿನ ಹೊನ |
ಲಿಳಿಹುದೆನುತರಿದೆದ್ದಾಗ ||
ನಿಳಯಕೆ ಬಂದದ | ತಿಳುಹುತಲೆಲ್ಲವ |
ಬಲಯುತ ಶ್ವೇತಕುಮಾರನಿಗೆ || 50 ||

ಶೋಕವ ಬಿಡಿಸಿ ವಿ | ವೇಕದಿ ಪಿತನಿಗೆ |
ಬೇಕಾದುತ್ತರಕ್ರಿಯೆ ರಚಿಸೇ ||
ಲೋಕದ ಪಟ್ಟವ ಶ್ವೇತಕುಮಾರಗೆ |
ಶ್ರೀಕರ ಸುಮುಹೂರ್ತದಿ ಕಟ್ಟೇ || 51 ||

**ವಾರ್ಧಕ**
ಉತ್ಸಾಹದಿಂದ  ಜಯ ಜಯವೆಂದು ಸಭಿಕ ಜನ |
ರುತ್ತರೋತ್ತರ ಶುಭೋದಯವ ಕೋರುತಲುಲಿಯ |
ಲತ್ಯಧಿಕ ವೈಭವದಿ ಸಿಂಹಾಸನದೊಳೆಸೆಯೆ ವೀರ ಶ್ವೇತಕುಮಾರನು ||
ನರ್ತನಾದಿ ವಿನೋದದಿಂದ ಮೋದಾನಂದ |
ದುತ್ಸವಂ ಮೆರೆಯೆ ಹರಿ ಹರರ ಸಂಕೀರ್ತಿಸುತ |
ಲುತ್ತಮೋತ್ತಮ ನಾರದಾಂಕನೈತರಲು ನೃಪನೆದ್ದು ತಾ ಸತ್ಕರಿಸುತ || 52 ||

**ಸುರುಟಿ - ಏಕ**
ದೇವ ಮೌನಿವರ್ಯಾ | ಶ್ರೀಗುರು |
ದೇವ ಭುವನ ಕಾರ್ಯಾ ||
ದೇವೇಶಾದಿ ಸು | ರಾವಳಿವಂದ್ಯ |
ಸದಾ ವರದಾಯಕ || ಪಾವನ ಮೂರುತೇ || 53 ||

ಪಟ್ಟವೇರ್ದೆನಿಂದೂ | ನೀ ದಯ |
ವಿಟ್ಟು ಬಂದುದೊಂದು ||
ಶ್ರೇಷ್ಠವಿದೆಮ್ಮಯ | ಪಟ್ಟಣವೇ ಜಯ |
ತುಷ್ಟಿಯ ಹೊಂದಿತು | ಕಷ್ಟವ ನೀಗಿತು || 54 ||

ಮುಂದಕಿನ್ನು ಧರೆಯಾ | ನಿತ್ಯಾ |
ನಂದದಿಂದ ವಿಜಯ ||
ಹೊಂದುತಲಾಳಲು | ಚಂದದಿ ಹರಸುವ |
ದಿಂದು ಕೃಪಾಕರ | ವಂದಿತ ಶುಭಕರ || 55 ||

**ಮಧುಮಾಧವಿ - ಏಕ**

ಮೆಚ್ಚಿದೆ ಮಗನೆ ನಾ ನಿನ್ನಯ ನುಡಿಗೆ |
ಹೆಚ್ಚಿನ ಶ್ರದ್ಧೆಯ ಭಕ್ತಿಯ ಬಗೆಗೆ || ಪ ||
ಅಷ್ಟು ಸೌಭಾಗ್ಯದಿ ನಿನಗೆಣೆಯಿಲ್ಲ |
ದಿಟ್ಟ ಶೌರ್ಯಾಗ್ರಣಿ ಹೇ ಭುಜಮಲ್ಲ ||
ಸೃಷ್ಟಿಯೊಳ್ ಸಕಲ ಸಂಪನ್ನನೆಂದೆನಿಸಿ |
ಶ್ರೇಷ್ಠನಾಗಿರು ಪೂರ್ಣ ಕೀರ್ತಿಯ ಗಳಿಸಿ || 56 ||

ಆದರೊಂದುಂಟೀಗ ಕೊರತೆಯ ಕೇಳು |
ಸಾದರದೊಳು ನೀನು ಪಟ್ಟವೇರಿರಲು ||
ಆದಿಮಾಯೆಯ ಪೋಲ್ವ ಸುಂದರಾಂಗದೊಳು |
ಪಾದ ಸೇವಿಪ ಪಟ್ಟದರಸಿಯೆಲ್ಲಿಹಳು || ಮೆಚ್ಚಿದೆ || 57 ||

ವೀರ ನೀನದರಿಂದ ಕಾಶಿದೇಶದೊಳು |
ಶೂರಸೇನನ ಪುತ್ರಿ ಶಿವೆಯೆಂಬಳಿಹಳು ||
ನಾರಿ ಶಿರೋಮಣಿಯವಳನು ವರಿಸಿ |
ಸಾರ ಸೌಖ್ಯದೊಳಿರು ಪೋಗುವೆ ಹರಸಿ || 58 ||

**ಭಾಮಿನಿ**

ಇಂತು ಹರಸುತ ಹರನೆ ಲಕ್ಷೀ|
ಕಾಂತನೇ ಜಯವೆನುತ ನುತಿಸುತ |
ಲಂತ್ಯಮಿಲ್ಲದ ಮಹಿಮ ನಾರದ ಮುನಿಪ ಗಮಿಸಲ್ಕೆ ||
ಸಂತಸದೊಳಾ ನೃಪನು ತನ್ನಯ |
ಮಂತ್ರಿಯನು ಕರದೊಸಗೆ ಕಾರ್ಯವ |
ದೆಂತರಿತು ನಿಶ್ಚೈಸಿ ಕಳುಹಿದ ಕಾಶಿಪುರಕಾಗಿ || 59 ||

**ಕಂದ ಪದ್ಯ**

ಅತ್ತಲ್ ವಿಭವದಿ ಕಾಶಿ ನೃ |
ಪೋತ್ತಮನಹ ಶೂರಸೇನನೋಲಗವಿತ್ತುಂ ||
ಚಿತ್ತಾನಂದದೊಳಿರಲ |
ತ್ಯುತ್ಸಹದೊಳಗೈದಿ ಪೇಳ್ದನಾ ಮಂತ್ರೀಶಂ || 60 ||

**ಭೈರವಿ - ಝಂಪೆ**

ಲಾಲಿಸೆನ್ನರಿಕೆಯನು | ಶೀಲ ಗುಣಯುತ ನೃಪನೆ |
ಭೂಲಲನೆ ಮುಖ ಮುಕುರ | ದೋಲು ಶೋಭಿಸುವಾ || 61 ||

ರುದ್ರಪುರಪತಿ ಸುಪ್ರ | ಸಿದ್ಧ ಶ್ವೇತಕುಮಾರ |
ರುದ್ರ ಬಲ ಕಳುಹಿಸಿದ | ನುದ್ಯಮದೊಳೆನ್ನ || 62 ||

ನಾರದನನುಜ್ಞೆಯಲಿ | ನಾರಿ ಕುಲಮಣಿ ತವ ಕು |
ಮಾರಿ ಶಿವೆಯನು ವರಿಪ | ಸಾರ ಬಯಕೆಯನು || 63 ||

ನಿನ್ನೊಳರುಹಲು ಬಂದು | ಬಿನ್ನೈಸಿದೆನು ಮುಂದ |
ಕಿನ್ನೇನುಜ್ಞೆಯೆನ | ಗೆನ್ನೊ ಮಹರಾಯ || 64 ||

**ಸೌರಾಷ್ಟ್ರ - ತ್ರಿವುಡೆ**
ಭಳಿರೆ ಸಂತಸವಾದುದೀ ನುಡಿ |
ಬಲು ಪರಾಕ್ರಮಿ ಸಿತಕುಮಾರಗೆ |
ಸಲುವಳಲ್ಲದೆ ನಮ್ಮ ಕುವರಿಯ | ನೊಲಿಪನ್ಯಾರು || 65 ||

ಜ್ಞಾನನಿಧಿ ನಾರದರನುಜ್ಞಾ |
ವಾಣಿಯನು ಧಿಕ್ಕರಿಸಲಾರೆನು |
ರಾಣಿಯಾಗಲಿ ರುದ್ರಪುರಪತಿ | ಗೀನಿತಂಬೆ || 66 ||

ಸಫಲವಾಯಿತು ಜನ್ಮವಿದರಿಂ |
ದಪರಿಮಿತದಾನಂದ ಸಾಧನ |
ಸಫಲದಾಯಕ ವಿಶ್ವಪತಿ ತಾ | ಕೃಪೆಯಗೈದ || 67 ||

ಕರದು ಜ್ಯೋತಿಷ್ಕರನು ಬಳಿಕಾ |
ಧರಣಿಪತಿ ಸುಮುಹೂರ್ತವರಿಯುತ |
ಬರುವದಾ ದಿನಕೆಲ್ಲ ದಿಬ್ಬಣ | ವೆರಸಿ ನೀವು || 68 ||

ಯೆನುತ ಕಳುಹಲು ಬಂದು ಮಂತ್ರೀ |
ಶನು ಸಮಸ್ತವನರುಹೆ ನೃಪದಿ |
ಬ್ಬಣವನೆರಹುತಲಾ ಮುಹೂರ್ತ | ಕ್ಕೆಣಿಸಿ ಪೊರಟ || 69 ||

**ಸಾಂಗತ್ಯ - ರೂಪಕ**
ದಿಬ್ಬಣ ಸಹಿತಲಿ ಬರಲು ಕಾಶೀಪತಿ |
ಯುಬ್ಬುತಲಿದಿರುಗೊಂಡವರ ||
ಕಬ್ಬುಬಿಲ್ಲನ ಸತಿಯಂತಿಪ್ಪ ಶಿವೆಗೆ ಪ |
ರಬ್ರಹ್ಮರೂಪ ನೀನೆಂದು || 70 ||

ಶ್ವೇತಕುಮಾರಗೆ ಧಾರೆಯನೆರೆಯುತ |
ಚಾತುರ್ಥಿಕಾದಿ ಸತ್ಕಾರ್ಯ ||
ಸ್ವಾತಿಶಯದಲಿ ನಿರ್ವಿಘ್ನದಿ ನೆರವೇರ |
ಲಾತನು ಬಳಿವಳಿ ಸಹಿತ || 71 ||

ಬಾಳಿ ಸೌಖ್ಯದಿ ದಂಪತಿಗಳೆಂದು ಹರಸುತ್ತ |
ಲೀಲೆಯಿಂ ಬೀಳ್ಕೊಡಲವರ ||
ಬಾಲೆಯನೊಡಗೊಂಡು ಶ್ವೇತಕುಮಾರನು |
ಬಾಳ ಸಂಭ್ರಮದಿಂದ ಪೊರಟ || 72 ||

**ಭಾಮಿನಿ**
ಮುನಿವರರೆ ಲಾಲಿಸುವದೀತೆರ |
ಜನಪ ಶ್ವೇತಕುಮಾರ ಬರುತಿರ |
ಲೆನಿತು ಬಣ್ಣಿಪೆ ಮುಂದೆ ಕೊಂಡಾರಣ್ಯವೆಸದಿರಲು ||
ವನಜಗರ್ಭನ ಸೃಷ್ಟಿಯೊಳು ಪೊಸ |
ತೆನಲು ಭೀಕರ ದನುಜೆ ದುರ್ಜಯ |
ನನುಜೆ ದುರುಳೆ ಕರಾಳಲೋಚನೆ ಬಂದಳಾರ್ಭಟಿಸಿ || 73 ||

**ಮುಖಾರಿ - ಅಷ್ಟ**
ಆರಿದಿರಾದವರೂ | ನರಾಧಮ |
ರ್ಯಾರಿದಿರಾದವರೂ ||
ಘೋರ ಕಾನನದೊಳಗೆ ನಮ್ಮ ಸ |
ವಾರಿಗಿದಿರಿನೊಳಿಂತು ಬರ್ಪವ |
ರ್ಯಾರು ಯಮನಡೆ ಸೇರುವಂದದಿ |
ನಾರಿ ಮಕ್ಕಳು ಸಹಿತ ಭಲೆ ಭಲೆ || 74 ||

ಮನುಜ ಮಾಂಸವ ಮೆಲದೆ ಕೆಲದಿನ |
ವೆಣಿಕೆಗಾಯಿತು ಬಂದುದೊಳ್ಳಿತು |
ಮನುಮಥಾರಿಯ ದಯದೊಳೊದಗಿದು |
ದಿನಿತು ಮಾರ್ಬಲ ಜನ್ಮ ಸಫಲವು || 75 ||

ರುಂಡ ಮುಂಡವ ಬೇರೆ ಬೇರೆ |
ತುಂಡು ತುಂಡನೆ ಗೈದು ಮಾಂಸದ |
ಖಂಡಗಳ ಹಸಿ ಹಸಿಯ ನುಂಗುವೆ |
ನುಂಡು ತೇಗುವೆನಾರು ತಡೆವರು || 76 ||

**ಕಂದ ಪದ್ಯ**
ಇನಿತಾ ಭೀಕರ ರಾಕ್ಷಸಿ |
ಘನತರದಾರ್ಭಟೆಯಲಿ ಬರಲಿದಿರಿನೊಳಾಗಲ್ ||
ವನಜಾಂಬಿಕಿ ಶಿವೆ ನಡುಗಲ್ |
ಜನಪಾಗ್ರಣಿ ಸಿತಕುಮಾರ ದನುಜೆಯ ತಡೆದಂ || 77 ||

**ಶಂಕರಾಭರಣ - ಮಟ್ಟೆ**
ನಿಲ್ಲು ನಿಲ್ಲು ದುರುಳೆ ಮುಂದ |
ಕೆಲ್ಲಿ ಪೋಪೆ ನಿನ್ನ ಸಹಸ |
ವಿಲ್ಲಿ ಸಲುವದಲ್ಲ ತೆರಳು | ಕಳ್ಳ ರಕ್ಕಸೀ || 78 ||

ಕಳ್ಳನೆಂದು ಪೇಳ್ವೆಯಾ ನಿ |
ನ್ನಲ್ಲಿ ಶೌರ್ಯವಿಹುದೆ ಗೆಲಲು |
ಹಲ್ಲು ಹಲ್ಲು ತಾಗದಂತೆ | ಮೆಲ್ಲುವೆನು ಘಡ || 79 ||

ಖ್ಯಾತ ರುದ್ರಪುರವನಾಳ್ವ |
ಶ್ವೇತಕುವರ ನಾನು ನಿನ್ನ |
ಖ್ಯಾತಿಗಂಜೆ ಬರಿದೆ ಬಗುಳ | ಲ್ಯಾತಕೆನ್ನೊಳು || 80 ||

ಶೋಣಿತಾಖ್ಯ ಪುರದ ವರ ಸು |
ತ್ರಾಣ ದುರ್ಜಯಾಂಕನನುಜೆ |
ದಾನವಿಯರೊಳಗೆ ಸರಿಸ | ಮಾನರಿಲ್ಲವು || 81 ||

ಸಾಗು ಸಾಕೆನುತ್ತಳವಳ |
ಕೈಗಳೆರಡ ಶ್ವೇತಕುವರ |
ನಾಗ ಕಡಿದು ಕೆಡಹಿದನು ಸ | ರಾಗದಿಂದಲಿ || 82 ||

**ವಾರ್ಧಕ**
ಸರಿಯಾಯ್ತು ದುಷ್ಟೆಗೀ ಶಿಕ್ಷೆಯಿಂದೆನುತಾಗ |
ಸುರರಂಬರದಿ ಪುಷ್ಪವೃಷ್ಟಿಯಂ ಸುರಿಸುತಿರೆ |
ದುರುಳೆ ಕೂಗುತಲತ್ತಲೊರೆವೆನಣ್ಣನಿಗೆಂದು ಗಮಿಸಲಿತ್ತಲು ನೃಪತಿಯು ||
ಹರುಷದಿಂ ಸತಿ ಸಹಿತಲೈದಿ ಪುರವರಕಾಗಿ |
ವರಮುಹೂರ್ತದಿ ಗೃಹಪ್ರವೇಶಮಂ ಗೈಯೆ ಭಯ |
ಕರ ರವದಿ ತುಂಬಿತಾ ಪಟ್ಟಣವೆ ಮಂಗಳ ಮಹೋತ್ಸವಾನಂದದಿಂದಾ || 83 ||

**ಭಾಮಿನಿ**
ಮುಂಗಥೆಯ ಲಾಲಿಪುದು ಮುನಿಗಳೆ |
ಪಿಂಗಡಿಸಾರ್ಗಳವು ವಿಧಿಲಿಪಿ |
ಯಂಗವನು ನೃಪಗಾಯ್ತು ಬಯಕೆಯು ವನವಿಹಾರದೊಳು ||
ಸಿಂಗರದ ಬೆಡಗಿಂದ ಪೊರಟನು |
ತುಂಗಭುಜಬಲ ವನದ ಸಿರಿ ಸೊಬ |
ಗಿಂಗೆ ತಲೆದೂಗುತ್ತಲೀಕ್ಷಿಸುತಿರ್ದ ಮನದಣಿಯೆ || 84 ||

**ಆರ್ಯ ಸವಾಯ್**
ತುಸು ದೂರದಿ ನವ | ಕುಸುಮದ ಗಂಧವ |
ಪಸರಿಸಿ ಸುಮಗಳ ಕೊಯ್ಯುತಲಿ ||
ಬಿಸಜದಳಾಕ್ಷಿ ತ್ರಿಲೋಕಸುಂದರಿಯೆಂಬ |
ಪೊಸ ಜವ್ವನೆಯಬಲೆಯು ಬರಲು || 85 ||

**ಕಂದ ಪದ್ಯ**
ಅಬಲಾಮಣಿ ಮಾರನರಗಿಣಿ |
ಯಬುಜಾಂಬಕಿ ರಂಭೆಯೂರ್ವಶಿಯರಂ ಪಳಿವೋಲ್ ||
ಸೊಬಗಿಂ ಮೆರೆಯಲ್ಕಂಡಾ |
ಸುಬಲಂಗಜನ ಬಾಣ ತಾಗಲ್ಕೆಂದಂ || 86 ||

**ಯಮುನಾ ಕಲ್ಯಾಣಿ – ಅಷ್ಟ**
ಇವಳ್ಯಾರಿದರರೆ ಮಂಜುಳಗಾತ್ರೇ | ತ್ರೈ |
ಭುವನ ಮೋಹಿನಿ ಸಾರಸನೇತ್ರೇ || ಪ ||
ಮೊಗ ಚಂದಿರನ ಬಿಂಬ ಹೊರತಲ್ಲಾ | ಚೆಲ್ವ |
ನಗೆಯದು ಚಂದ್ರಿಕೆಯಹುದಲ್ಲಾ ||
ಸೊಗಸಿನ ಮುಂಗುರುಳ್ಮರಿದುಂಬಿ | ಬಪ್ಪ |
ಬಗೆ ನೋಡೆ ನಲಿವಳ್ಯೌವನದುಂಬಿ || 87 ||

ಶೃಂಗಾರ ಬೆಡಗಿನ ಶುಕವಾಣೀ | ಮಾ |
ತಂಗಗಾಮಿನಿ ಸರ್ಪನಿಭವೇಣೀ ||
ತುಂಗಪಯೋಧರೆ ಸುಕಪೋಲೆ | ಇವ |
ಳಂಗ ಸಂಗದ ಭಾಗ್ಯವದು ಮೇಲೆ || 88 ||

ಆಹಾ ನಾನಿಲ್ಲಿ ಬಂದುದು ಪುಣ್ಯ | ಇಂಥ |
ಮೋಹಿನಿಗಾಗಲು ಕಾರುಣ್ಯಾ ||
ದೇಹ ಸಾಫಲ್ಯವಕ್ಕದರಿಂದ | ಪ್ರೇಮ |
ಮೋಹದಿ ಮಾತನಾಡಿಸೆ ಚಂದ || 89 ||

**ಕಲ್ಯಾಣಿ - ಅಷ್ಟ**

ನಾರೀ | ಬಲು ವೈ | ಯ್ಯಾರಿ ನೀ ನಾರೀ |
ದಾರಿಯೊಳೇನ್ ಸ್ವಾರಿ ||
ಸಾರ ಮನೋಹರಿ | ಸಾರಸಾಕ್ಷಿ ಸರಿ |
ಯಾರಿಲ್ಲವು ನಿನ | ಗೀ ರಸೆಯಲಿ ಸರಿ || ಪ ||
ನಿನ್ನಯ | ಪಿತನಿನ್ನೆಲ್ಲಿಹನ್ಯಾರವ |
ನೆನ್ನು ಸುಗುಣಮಣಿಯೇ | ಸಂಶಯ |
ವೆಣ್ಣಬೇಡನವ | ಕನ್ನೆ ಮನ್ನೆತನ |
ಪುಣ್ಯಕಿಲ್ಲವೆಣೆಯೇ | ನಿರ್ಣಯಾ | ತಿಳಿದಿಲ್ಲವೆಲ್ಲ ನುಡಿ |
ನನ್ನಿಯಾ | ರಮಣೀಯ ಕಾಂತಿಯ |
ರನ್ನದ ಕನ್ನಡಿ | ಕೆನ್ನೆಯ ಶುಭ ಸಂ |
ಪನ್ನೆಯೆ ಕಾಮಿನಿ | ರನ್ನೆಯೆ ಮೋಹಿನಿ || ನಾರಿ || 90 ||

ಸೋತೆನು | ನಿ | ನ್ನೀ ತೆರ ಸೊಬಗಿನ |
ರೀತಿಗಾಗಿ ಚದುರೇ | ನಾನೀ |
ಭೂತಳೇಂದ್ರ ವರ | ಶ್ವೇತಕುಮಾರ ಧುರ |
ಖ್ಯಾತನಾರ್ಗು ಬೆದರೇ | ದಾತನೂ |
ಸತ್ಯಾತ್ಮ ಸಜ್ಜನ | ನಾಥನೂ | ವರಿಸೆನ್ನ ನೀ ಸು |
ಪ್ರೀತಳಾಗು ನಿರ್ | ಭೀತಳಾಗು ಮೃದು |
ಮಾತನಾಡೆ ಮದ | ನಾತುರವನು ಬಿಡು || ನಾರೀ || 91 ||

**ಭೈರವಿ - ಝಂಪೆ**

ಲೋಕೇಶಕುವರಿ ತ್ರೈ | ಲೋಕಸುಂದರಿಯು_ನಾ |
ನಾ ಕಮಲಭವನೆನ್ನ | ನೀ ಕಡೆಗೆ ಕಳುಹಿ || 92 ||

ಸ್ವೇಚ್ಛೆಯಿಂದಿರಲು ಬಗೆ | ಯೆಚ್ಚರಿಸಿ ನೇಮಿಸಿಹ |
ನಿಚ್ಚಿಸುವುದ್ಯಾಕೆನ್ನ | ಹುಚ್ಚುತನ ನಿನಗೆ || 93 ||

ಸುರಪಾಲ ಮುಖ್ಯಸುರ | ವರರೆನ್ನ ಸೌಂದರ್ಯ |
ಸುರುಚಿರಾಲಂಕೃತಿಗೆ | ಮರುಳಾಗುತಿಹರು || 94 ||

ಇನಿತಿರಲು ನಿನ್ನ ಪಾ | ಡೆನಗೇನು ಮನುಮಥನ |
ಮೊನೆಯಂಬಿನುರಿಗ್ಯಾಕೆ | ಘನತೆಯನು ಕಳೆವೆ || 95 ||

ಪೋಗಿ ನಿನ್ನರಮನೆಗೆ | ಭೋಗಿಸೈ ಶೌರ್ಯ ಸುಖ |
ಸಾಗು ನಡೆ ಸರಿಯಲ್ಲ | ಹೀಗೆಂಬುದಲ್ಲ || 96 ||

**ಕೇದಾರಗೌಳ - ಝಂಪೆ**

ಥರವಲ್ಲ ಬಾಲೆ ನಿನಗೇ | ಇಂತು ಧಿ |
ಕ್ಕರಿಸುವುದು ಸುಮ್ಮನೆನಗೆ ||
ಭರಿತ ಯೌವನ ತುಂಬಿದೆ | ನಿನ್ನಂಥ |
ತರುಣಿಯಿ ತೆರನೆಂಬುದೇ || 97 ||

ಅಷ್ಟ ಸೌಭಾಗ್ಯದೊಳಗೇ | ಸೌಂದರ್ಯ |
ಪುಷ್ಟಿತನು ಮೋಹದೊಳಗೇ ||
ಬಿಟ್ಟಿಲ್ಲ ಸುರಪಾಲಗೇ | ನಾನೆಂಬು |
ದಿಷ್ಟರಿತು ನೆರೆಯೊಮ್ಮಗೆ || 98 ||

ಸಿರಿ ಭಾಗ್ಯ ಸೌಂದರ್ಯದೀ | ಕೊರತೆ ಕಂ |
ಡೊರೆದುದಲ್ಲದು ಧೈರ್ಯದಿ ||
ಮರೆತುಬಿಡು ಮರುಳಾಟವಾ | ದೇವ ಸುಂ |
ದರಿಯಾನು ಕೊಡೆ ಕೂಟವಾ || 99 ||

ದೇವ ಸುಂದರಿಯೆಂಬುದಾ | ಮನದೊಳಗೆ |
ಭಾವಿಸಿಯೆ ನಾ ನಂಬಿದಾ |
ಭಾವವಿದು ಫಲವ್ಯಾತಕೇ | ಕೂಡೆನ್ನ |
ಬಾ ವನಜಮುಖಿ ನಿಮಿಷಕೇ || 100 ||

ಆದರೆಲೆ ಭೂಪ ನಿನ್ನಾ | ಸೌಭಾಗ್ಯ |
ಮೇದಿನಿಯನೆಲ್ಲ ಮುನ್ನಾ |
ನೀ ಧಾರೆಯೆರದು ಕೊಡಲು | ಕೂಡುವೆ ವಿ |
ನೋದದಿಂದಲಿ ರಮಿಸಲೂ || 101 ||

**ಭಾಮಿನಿ**

ಮತ್ತಕಾಶಿನಿಯರ ಚರಿತ್ರವು |
ಚಿತ್ರವಲೆ ತ್ರೈಲೋಕಸುಂದರಿ |
ಯೆತ್ತಿದಾ ನುಡಿಯಮೃತಬಿಂದಿನೊಲಾಯ್ತು ನೃಪವರಗೇ ||
ಯಿತ್ತೆನಿದೊ ಭಾಷೆಯನು ನಿನಗೆ ಸ |
ಮಸ್ತ ಭಾಗ್ಯದ ಧರೆಯನೀವೆನು |
ದಾತ್ತತೆಯೊಳೊಲಿದೆನ್ನ ರಮಿಸೆನಲೊಪ್ಪಿದಳು ಬಾಲೆ || 102 ||

**ಕಂದ ಪದ್ಯ**

ಸುದತೀಮಣಿಯೊಡನಾಗಲ್ |
ಮದನವಿಲಾಸಕ್ಕೊದಗುತ ಶ್ವೇತಕುಮಾರಂ ||
ವಿಧ ವಿಧದಾನಂದದಿ ಸುಖಿ |
ಸಿದನೆಲ್ಲವ ಮರದು ಕಾಮವಶನಾಗಿರ್ದಂ || 103 ||

**ಕಾಂಭೋದಿ - ಝಂಪೆ**

ಇತ್ತಲಿಂತಿರುತಿರಲಿ | ಕತ್ತ ಶೋಣಿತಪುರದಿ |
ಧೂರ್ತ ದುರ್ಜಯನಧಿಕ ಮದದಿ ||
ಮತ್ತ ಖಳ ಮೊತ್ತದಿಂ | ದಿತ್ತನೋಲಗವ ಸಚಿ |
ವಾಪ್ತಜನರೊಗ್ಗಿನಲಿ ಮುದದಿ || 104 ||

ಎಡ ಬಲವ ನೋಡುತಲಿ | ಸಡಗರದಿ ವೀರ ಖಳ |
ರೊಡನೆಂದನಿನಿತು ಸೌಭಾಗ್ಯ ||
ಬಿಡುಗಣ್ಣರೆರೆಯಗಿ | ಲ್ಲೊಡೆಯರ್ಯಾರೆಮ್ಮಂತೆ |
ಪೊಡವಿ ಮೂರರೊಳೇನು ಭಾಗ್ಯ || 105 ||

ಸಂಗರದೊಳೆಮ್ಮನು ರ | ಣಾಂಗಣದೊಳಿದಿರಿಸಲು |
ತಂಗದಿರಧರನಿಗಳವೆನುತ ||
ತುಂಗಬಲನಿರೆ ಮಾನ | ಭಂಗದುರುಬೆಯೊಳವನ |
ತಂಗಿ ನಡೆತಂದಳಾ ಸಭೆಗೇ || 106 ||

**ಭೈರವಿ - ಅಷ್ಟ**
ಯೇನಿದೇನಿದು ತಂಗಿಯೇ | ನಿನ್ನಯ ಕೈಗ |
ಳೇನಾಯ್ತು ಲಲಿತಾಂಗಿಯೇ ||
ದಾನವಕುಲದ ಮೌಳಿ | ನಾನಿರೆ ನಿನಗಿಂಥ |
ಹಾನಿಗೈದರಾರು || 107 ||

ಸುರರೋ ಕಿನ್ನರೋ ಪೇಳು | ಅಲ್ಲದಡಾ ಶಂ |
ಕರನೊ ವಿಘಾತಿಗಳು ||
ಹರಿ ಬ್ರಹ್ಮರಾಗಲಿ | ಗರಗರನವರ ಕಂ |
ಧರವನು ತರಿಯುವೆನೂ || 108 ||

ತಂಗಿ ನೀನಂಜದಿರು | ತ್ರೈಲೋಕವ |
ನುಂಗಬಲ್ಲೆನಗಿದಿರು ||
ಹಿಂಗದ ಭಟರಿಲ್ಲ | ಭಂಗವ ಗೈದವ |
ರಂಗವ ಪೇಳಬಲೇ || 109 ||

**ಭೈರವಿ - ಝಂಪೆ**
ಅಣ್ಣ ಲಾಲಿಸು ನರರ | ತಿನ್ನಬೇಕೆಂಬಾಸೆ |
ಯೆನ್ನ ಮನಕಾಗಲಾ | ರಣ್ಯದೊಳು ಪೊರಟೆ || 110 ||

ಸಾರುತಿರಲೊಂದು ಕಾಂ | ತರದೊಳಗೊರ್ವ ಸುಕು |
ಮಾರ ಪರಿವಾರ ಸಹ | ದಾರಿಗಿದಿರಾದ || 111 ||

ಕಂಡು ನಾ ತೋಷದಲಿ | ಖಂಡಿಸುವೆನೆನುತ ನಿಲೆ |
ಖಂಡಪರಶುವ ರೋಷ | ಗೊಂಡು ನರ ಪೋರ || 112 ||

ಈ ತೆರದಿ ಕರಗಳನು | ಘಾತಿಸಿದ ರುದ್ರಪುರ |
ದಾತ ಶ್ವೇತಕುಮಾರ | ನಾತನೆಂದರಿದೆ || 113 ||

ಪಯಣದಲಿ ಶಿವೆಯೆಂಬ | ತರುಣಿಯನು ವರಿಸಿ ಬಹ |
ಬರವವನ ಸೊಬಗೇನ | ನೊರೆವೆನಾ ಸತಿಯ || 114 ||

ರಂಭೆಯೂರ್ವಶಿಯರೆಂ | ದೆಂಬ ನಾರಿಯರೆಲ್ಲ |
ಕಂಬುಕಂಧರೆಯ ಕಾ | ಲ್ಗಿಂ ಬಪ್ಪರೆಲ್ಲಾ || 115 ||

ಪೋಗಿ ನೀನಾ ನರನ | ಸಾಗಿಸುತ ಯಮನೆಡೆಗೆ |
ನಾಗವೇಣಿಯ ತಂದ | ರಾಗಬಹುದಣ್ಣ || 116 ||

**ಭಾಮಿನಿ**
ಘೋರ ದಾನವಿಯೆಂದ ನುಡಿಗಾ |
ವೀರದುರ್ಜಯನೊಪ್ಪಿ ಖಳ ಪರಿವಾರ |
ದೊಡನೈದುವೆನೆನುತ್ತಲಿ ಪೊರಡೆ ಕಂಡಾಗ ||
ಭೂರಿಭುಜಬಲ ದನುಜಪತಿ ಸುಕು |
ಮಾರ ಲೋಹಿತನೇತ್ರ ಘನ ಗಂ |
ಭೀರನಾದದೊಳೆಂದನಾ ದಿತಿಜೇಂದ್ರಗಭಿನಮಿಸಿ || 117 ||

**ಮಾರವಿ - ಏಕ**
ಬೊಪ್ಪನೆ ನೀನೆನ | ಗಪ್ಪಣೆ ಪಾಲಿಪು |
ದಪ್ಪಳಿಸುತ ನರನ ||
ತಪ್ಪದೆ ಪಿಡಿದೆಳ | ತಪ್ಪೆನು ಸುದತಿಯ |
ನೊಪ್ಪಿಸುವೆನು ಪದಕೆ || 118 ||

ಹರಿ ಹರ ಬ್ರಹ್ಮ | ದ್ಯರು ನಡೆತಂದರು |
ಸರಿಯೆನು ನಾ ಹಿಂದೆ ||
ಹರಿಗೆಣೆಯೇ ಬಡ | ಕುರಿ ನೊರಜುಗಳರಿ |
ದಿರುವೆನು ನಿಮಿಷದಲಿ || 119 ||

ಅತ್ತೆಯ ಮೇಲ್ ಕೈ | ಎತ್ತಿದ ಮನುಜನ |
ನೆತ್ತರ ಹೀರದಡೆ ||
ಪುತ್ರನೆ ನಾ ನಿನ | ಗುತ್ತಮ ವೀರನೆ |
ಚಿತ್ತಕೆ ಭಯವಿಲ್ಲ || 120 ||

**ಸೌರಾಷ್ಟ್ರ - ತ್ರಿವುಡೆ**
ಭಳಿರೆ ಭಾಗ್ಯದ ಮಗನೆ ನಿನ್ನಯ |
ಬಲು ಸಹಸ ವೀರೋಕ್ತಿಗೊಪ್ಪಿದೆ |
ಹುಲು ನರನ ತರಿದೊಟ್ಟಿ ತರುಣಿಯ | ನೆಳದು ತಾರೋ || 121 ||

ನಿನಗೆ ಮಂಗಲವಾಗಲೆನುತಾ |
ದನುಜಪತಿಯಪ್ಪಣೆಯ ಪಾಲಿಸೆ |
ಘನ ಪರಾಕ್ರಮದಿಂದ ಪೊರವಂ | ಟನು ಕುಮಾರ || 122 ||

ಕಳಕಳದು ಹಲ ನಾಡು ಕಾನನ |
ಗಳನು ಬಲಸಹ ರುದ್ರಪುರ |
ವನು ಬಳಸಿ ಮುತ್ತಿದನೈದಿ ಸಾಹಸ | ದೊಳಗೆ ಖಳನು || 123 ||

**ಭಾಮಿನಿ**
ಪುರವ ಮುತ್ತಿರಲಂತು ಮಂತ್ರಿಯು |
ಹರಹರಾ ಭೂಪಾಲನಿಲ್ಲದ |
ಪರಿಯರಿತು ನಡೆತಂದರಾ ಖಳರೇನ ಮಾಡುವುದು ||
ಧುರದಿ ಹಳಚುವನ್ಯಾರು ರಿಪುಗಳ |
ತರಿವ ಬಗೆಯಿನ್ನೆಂತು ಮುಂದೇ |
ನರಿಯೆ ಹಾಯೆನಲವನ ಸುತ ಸಿತಕೇತನಿಂತೆಂದ || 124 ||

**ಭೈರವಿ - ಝಂಪೆ**
ತಾತನವರೇ ಬರಿದೆ | ಭೀತರಾಗುವದ್ಯಾಕೆ |
ಘಾತಕ ಖಳಾಧಮರ | ನಾ ತರಿದುಕೊಡುವೆ || 125 ||

ಭೂಪನಿಲ್ಲದ ಬಗೆಯ | ನಾ ಪಾಪಿಗಳು ತಿಳಿದ |
ರೇ ಪಂದೆಗಳ ಸುಪ್ರು | ತಾಪವನು ನೋಳ್ಪೆ || 126 ||

ಹುಟ್ಟೂರಿಗೀ ಪರಿಯ | ಕಷ್ಟವನು ಕೊಟ್ಟವರ |
ಕೆಟ್ಟವರ ತರಿಯದಿರೆ | ದಿಟ್ಟತನವ್ಯಾಕೆ || 127 ||

ಉಪ್ಪನ್ನವನು ಪಾಲಿ | ಸಿಪ್ಪ ದೊರೆಗಾಗಿ ಹೊಯಿ |
ದಪ್ಪಳಿಸಿ ಬಹೆ ಕಳುಹಿ | ಸಪ್ಪಣೆಯನಿತ್ತು || 128 ||

ಯಿಂತೆನಲಿಕೆಲೆ ಮಗನೆ | ನೀಂ ತಿಳಿಯೆ ಚಿಕ್ಕವನ |
ನಂತಬಲ ಖಳರ ಗೆಲು | ವಂತ ಹದನೆಂತು || 129 ||

ತರಳನಾದರದೇನು | ಸರಳಮೊನೆಯುರುಬೆಯನು |
ದುರುಳರೊಮ್ಮೆಗೆ ಸಹಿಸಿ | ತೆರಳುವುದ ನೋಳ್ಪೆ || 130 ||

ಆದರೆಲೆ ಮಗನೆ ಶಿವ | ಕಾದುಕೊಳ್ಳಲಿ ನಿನ್ನ |
ಸಾದರದಿ ಜೈಸೆನಲು | ಪೋದ ಪದಕೆರಗಿ || 131 ||

**ಕಂದ ಪದ್ಯ**
ಮಾರ್ಬಲಸಹಿತಾ ಕುವರಂ |
ಕರ್ಬುರಸೈನ್ಯವ ಬಡಿದೊಡಪ್ಪಳಿಸುತ್ತಂ ||
ಉರ್ಬಲು ಲೋಹಿತನೇತ್ರಂ |
ಪೆರ್ಬುಲಿಯೋಲ್ ಗರ್ಜಿಸುತ್ತ ಮಾರಾಂತೆಂದಂ || 132 ||

**ಮಾರವಿ - ಏಕ**
ಆರೆಲವೋ ನರ | ಪೋರನೆ ನಮ್ಮಯ |
ವೀರರ ಸೋಲಿಸುತ ||
ಸಾರುವುದೆಲ್ಲಿಗೆ | ಹೀರುತ ಪ್ರಾಣವ |
ಸೇರಿಪೆ ಯಮನೆಡೆಗೆ || 133 ||

ಸಿತಕೇತನು ನಾ | ನತುಲ ಬಲಾಢ್ಯನು |
ಪೃಥ್ವಿಪ ಸಚಿವನಿಗೆ ||
ಸುತನಹೆ ನೀನ್ಯಾ | ರತಿಬಲಸಹ ಬರೆ |
ಕಥೆಯೇನದು ಪೇಳು || 134 ||

ವಿಸ್ತೃತ ಶೋಣಿತ | ಪತ್ತನದೊಡೆಯನ |
ಪುತ್ರ ಲೋಹಿತನೇತ್ರ ||
ಪೃಥ್ವಿಪತಿಯ ಬಡಿದೊತ್ತಿಯವನ ಸತಿ |
ಗೆತ್ತಲು ಬಂದಿಹೆನು || 135 ||

ಹಮ್ಮಿನ ಖಳ ನೀ | ನೆಮ್ಮರಸನ ಬಗೆ |
ಯೊಮ್ಮೆಗೂ ತಿಳಿಯುವೆಯಾ ||
ದುರ್ಮತಿಯೊಳ ನುಡಿ | ದಮ್ಮಯ ವಚನವ |
ಮಾರ್ಮಲೆಯಲು ಕೊಲುವೆ || 136 ||

ಕೊಲುವವನೇ ನೀ | ಹುಲುನರ ನೊರಜುವೆ |
ಹಲುಗಳ ಮುರಿದೀವೆ ||
ಬಿಲು ಶರದೇಳ್ಗೆಯ | ಬಲು ತರ ಶೌರ್ಯದ |
ನೆಲೆಯನು ನೀ ತಿಳಿಯೆ || 137 ||

**ಭೈರವಿ - ಏಕ**
ಯೆನೆ ಕೇಳುತ ಸಿತಕೇತಾ | ತಾ |
ನನಿಲಾಸ್ತ್ರವ ಬಿಡೆ ಧೂರ್ತ ||
ಫಣಿಶರದಿಂದದ | ತರಿಯೆ | ಬಳಿ |
ಕನಲಕಳಂಬವನೆಸೆಯೆ || 138 ||

ಜಲಜಬಾಣದೊಳದ ಮುರಿದು | ಆ |
ಖಳಪತಿ ತಾ ಬೊಬ್ಬಿರಿದು ||
ನಲಿಯಲು ತಿಮಿರಾಶುಗವಾ | ಬಿಡೆ |
ಗೆಲಿದನು ರವಿಯಿಂ ಶರವ || 139 ||

ಬಳಿಕಾ ಖಳ ಕೋಪದಲೀ | ಮಾ |
ರ್ಮಲೆಯುತ ಗಿರಿಬಾಣದಲಿ ||
ಬಳಲಿಸಲಾ ಸಿತಕೇತು | ಹಿಂ |
ದುಳಿದೋಡಿದ ತಾ ಸೋತು || 140 ||

**ವಾರ್ಧಕ**
ಚಿತ್ತವಿಸಿ ಮುನಿವರರೆ ಸಿತಕೇತ ಸೋತೋಡೆ |
ಮತ್ತೆ ಖಳನೊಳು ಸೆಣಸುವವರಿಲ್ಲದಿರೆ ನೃಪನ |
ದೆತ್ತಲಡಗಿದನೆನುತ ಧೂರ್ತನರಮನೆ ಸೇರಿ ಶಿವೆಯ ಕೈಸೆರೆ ಪಿಡಿಯುತ ||
ಉತ್ತಮ ಸುವಸ್ತುಗಳನೆತ್ತಿ ಪಿತನೆಡೆಗಾಗಿ |
ವಿಸ್ತಾರಬಲಸಹಿತಲೈದಲಿತ್ತಲು ವನದಿ |
ಪೃಥ್ವಿಪತಿ ತ್ರೈಲೋಕಸುಂದರಿಯ ಬೆರಸಿರಲು ನಾರದಂ ನಡೆತಂದನು || 141 ||

**ಸಾಂಗತ್ಯ - ರೂಪಕ**
ಮುರಹರ ಪುರಹರ | ಗಿರಿಧರ ಶಶಿಧರ |
ಶರಣೆಂದು ನುತಿಸಿ ನಾರದನು ||
ಬರಲು ದೂರದಿ ಕಂಡು | ಬೆರಗಾಗಿ ಭೂಪಾಲ |
ತ್ವರಿತದೊಳಿದಿರುಗೊಂಡಾಗ || 142 ||

ಕುಶದಾಸನವಿತ್ತು | ಕುಶಲವೆ ಹೇ ದೇವ |
ಋಷಿಗಳೇ ಪೇಳಿರೆಂದೆನುತ ||
ಬೆಸಗೊಳುತಿರೆ ನಿನ್ನ | ಪೊಸ ರೀತಿಯೇನಿದು |
ವ್ಯಸನವಾಗುವುದೆಲ್ಲ ನೆನೆದು || 143 ||

ಹಾ ಕುಮಾರನೆ ನೀನು | ಯಾಕಿಲ್ಲಿಗೈತಂದೇ |
ಶ್ರೀಕರಶಿವೆಯನು ಬಿಟ್ಟು ||
ಆ ಕಡೆ ಶೋಣಿತಪುರ| ದೊಡೆಯನ ಸುತ |
ಪೋಕತನದೊಳಿಲ್ಲಿ ಬಂದು || 144 ||

ಪುರವ ಮುತ್ತುತೆಲೆಲ್ಲ | ವರನು ಸೋಲಿಸಿ ನಿನ್ನ |
ತರುಣಿಯ ಕೈಸೆರೆ ಪಿಡಿದು ||
ತೆರಳಿರ್ಪನಿನ್ನಾದ | ರರಿತು ನೀನ್ನೈದಿ ದು |
ಷ್ಟರ ಕೊಂದು ಸತಿಯನು ಬಿಡಿಸು || 145 ||

**ಕಂದ ಪದ್ಯ**
ನಾರದನಿಂತೆಂದಂಬರ |
ಕೇರಿದ ಹರಿ ಹರರ ಕೀರ್ತನೆಯ ಗೈಯ್ಯುತ್ತಂ ||
ವೀರಂ ಮನದೊಳ್ ದುಃಖಿಸಿ |
ಹಾ ರಮಣೀಮಣಿಯೆ ಹಾಯೆನುತಲಳಲಿದನು || 146 ||

**ನೀಲಾಂಬರಿ - ತ್ರಿವುಡೆ**
ಹಾ ರಮಣೀಮಣಿಯೇ | ಮಂಜುಳ ರತ್ನ |
ಹಾರೆ ಮೋಹದ ಕಣಿಯೇ ||
ಮಾರನ ಕೈಯ ಕ | ಠಾರಿ ವೈಯ್ಯಾರಿ ವಿ |
ಚಾರಿ ಮನೋಹರಿ | ಸಾರಮಂಗಲಕರಿ || 147 ||

ಯಾಕೆ ನಾನಿಲ್ಲಿ ಬಂದೇ | ನಿನ್ನನು ಬಿಟ್ಟು |
ಶೋಕಿಗೆನ್ನುತಲಿ ನಿಂದೆ ||
ಲೋಕ ನಿಂದಿಪುದು ವಿ | ವೇಕವಿಲ್ಲದ ಹುಲು |
ಪೋಕನೆಂದೆನುತೆನ್ನ | ನ್ಯಾಕೆ ಬಂತೀ ಬುದ್ಧಿ || 148 ||

ಖಳನೇನೇನನು ಗೈದನೋ | ಅಯ್ಯಯ್ಯೋಯೆನ್ನ |
ವಲಿಸಿ ಹೀಗಾದುದಿನ್ನೋ ||
ಫಲವೇನು ಬಳಲಲೂ | ಕೊಲುವೆನೆಂತಾದರಾ |
ತಿಳಿಗೇಡಿಗಳನೆಲ್ಲ | ನೆಲೆಯನು ಹರ ಬಲ್ಲ || 149 ||

**ಭಾಮಿನಿ**
ಇನಿತ ಕಂಡು ತ್ರಿಲೋಕಸುಂದರಿ |
ಯೆನಗೆ ನೀ ಧಾರಿಣಿಯ ಪಟ್ಟವ |
ನನುಕರಿಸಿ ನಡೆ ನಿನ್ನ ಕಜ್ಜಕೆನಲ್ಕೆ ನೃಪನಾಗ ||
ಯೆಣಿಸಿ ಸತ್ಯವನಿತ್ತು ಸರ್ವವ |
ವಿನುತ ಮುದ್ರೆಯ ಮುದ್ರಿಕೆಯ ಕೊ |
ಟ್ಟನು ನಯದಿ ನೀನಾಳು ಪೋಗೆಂದೆನುತ ಕಳುಹಿದನು || 150 ||

**ಭೈರವಿ - ಝಂಪೆ**
ಅರಸನಿಂತೆಲ್ಲವನು | ತರಳೆಗಿತ್ತುಸುರಪತಿ |
ಪುರಕಾಗಿ ಪೊರಟು ಬರು | ತಿರಲತ್ತ ಖಳನಾ || 151 ||

ಪುತ್ರ ಲೋಹಿತನೇತ್ರ | ನೆತ್ತಿತಂದಬಲೆಯಳ |
ನಿತ್ತು ಪಿತನಿಗೆ ಮಣಿದು | ಬಿತ್ತರಿಸುತೆಲ್ಲ || 152 ||

ಭೂಪನಲ್ಲಿಲ್ಲ ಸುಕ | ಲಾಪಳನು ತಂದೀರ್ಪೆ |
ಪಾಪಿಯಡಗಿದನೆಲ್ಲೊ | ಪೋಪುದನು ತಿಳಿದು || 153 ||

ಎಂದೆನುತ ಮಗನ ನುಡಿ | ಗಂದದಿಂ ದುರ್ಜಯನು |
ಹಂದೆಯಡಗಿದರೇನು | ಮುಂದ ಸಿಕ್ಕುವನು || 154 ||

ಮೊದಲವಳ ವರಿಸುವದೆ | ಹದನವೆನಗೆಂದು ಖಳ |
ಸುದತಿಯಳ ಮೊಗ ನೋಡಿ | ಮುದದೊಳಿಂತೆಂದಾ || 155 ||

**ಸುರುಟಿ - ಏಕ**
ಮಂದಗಮನೆ ಕೇಳು | ನಿನಗಾ |
ನಂದದ ದಿವಸಗಳು ||
ಬಂದುದ ವರಿಸುತ | ಲಂದದೊಳೆನ್ನನು |
ಹೊಂದುತ ಸುಖಿಪುದು | ಮುಂದನವರತವು || 156 ||

ನಿನ್ನ ರಮಣನೆಣಿಕೇ | ಬೇಡಿ |
ನ್ನುನ್ನತ ಖಳಕುಲಕೇ ||
ಧನ್ಯತೆಯೆನ್ನಿಂ| ದೆಣ್ಣದಿರನ್ಯರ |
ಮನ್ನೆಯೆ ಗುಣಸಂ | ಪನ್ನೆಯೆ ಚೆನ್ನೆಯೆ || 157 ||

ಆವ ಪುಣ್ಯದ ಫಲವೋ | ನಿನಗಿ |
ನ್ನಾವ ದೇವನೊಲವೋ ||
ಭಾವಕಿ ನಿನ್ನ ಪ್ರ | ಭಾವದಿ ಕಳೆಯೆನ |
ಲಾ ವನಿತೆಯು ದು | ರ್ಭಾವನಿಗೆಂದಳು || 158 ||

**ಕೇದಾರಗೌಳ - ಅಷ್ಟ**
ರಕ್ಕಸಾಧಿಪ ಕೇಳು | ಸೊಕ್ಕಿನ ನುಡಿಗಳ |
ನೊಕ್ಕಣಿಸದಿರೆನ್ನೊಳು ||
ಸಿಕ್ಕುವಳಲ್ಲ ನಾ | ಠಕ್ಕಿನ ಬಲೆಯೊಳು |
ಮಿಕ್ಕಿ ಮಾತಾಡದಿರೊ || 159 ||

ಪರನಾರಿಯರ ಬೇಟೆ | ತರವಲ್ಲ ಧರ್ಮವ |
ನರಿಯದೆ ನರಕದೊಳು ||
ಹೊರಳದಿರೆಂದಿಗು | ಸ್ಮರತಾಪದೊಳು ಸಿಕ್ಕಿ |
ಪರಿತಾಪಗೊಳ್ಳದಿರು || 160 ||

ನಿನ್ನಂಥ ಖಳರಿಂತು | ಹೆಣ್ಣಿನಾಸೆಗೆ ಬಿದ್ದು |
ಮಣ್ಣನು ಸೇರಿಹರು ||
ಯೆನ್ನ ಮನೆಗೆ ನೀ | ಮನ್ನಿಸಿ ಕಳುಹಿಸಿ |
ಪುಣ್ಯದೊಳಿರು ಸುಖದಿ || 161 ||

**ಶಂಕರಾಭರಣ - ಮಟ್ಟೆ**
ಎಲೆಲೆ ಸುದತಿಮಣಿಯೆ ಬರಿದೆ |
ತಿಳಿಯದೆನ್ನೊಳೇನನೆಂಬೆ |
ಬಲಮೆಗಾರ್ತಿಯಹೆಯು ಸಾಕು | ಸಲಿಸು ಬಯಕೆಯ || 162 ||

ಭ್ರಷ್ಟ ಖಳನೆ ನೀನು ಬುದ್ಧಿ |
ಕೆಟ್ಟು ಮಾತನಾಡಬೇಡ |
ದಿಟ್ಟತನವು ಸಲ್ಲದೆನ್ನೊ | ಳೆಷ್ಟು ಮಾತ್ರಕು || 163 ||

ಅಂಬುಜಾಕ್ಷಿ ಸಾಕು ನಿನ್ನ |
ಜಂಬವೆಲ್ಲ ವರಿಸಲೊಪ್ಪು |
ರಂಭೆ ಮುಖ್ಯ ಸ್ತ್ರೀಯರೆನ್ನ | ಹಂಬಲಿಸುವರು || 164 ||

ಆದರವರ ಸೇರಿ ಸುಖಿಸು |
ಬಾಧಿಸದಿರು ಬರಿದೆ ಪ್ರಾಣ |
ಹೋದರೊದಗಲಾರೆ ನಿನಗೆ | ಬೋಧಿಸಿದೆನಿದೋ || 165 ||

**ಭಾಮಿನಿ**
ಏನದಾದರು ಸೇರೆನೆಂಬಾ |
ಮಾನಿನಿಯ ನಿರ್ಧಾರಕಾ ಖಳ |
ದಾನವನು ಖತಿಯಾಂತು ದಿನವೆಂಟಿತ್ತೆನವಧಿಯನು ||
ಪ್ರಾಣಗೊಳ್ಳುವೆನೊಪ್ಪದಿರೆ ಬಳಿ |
ಕಾನಲಾರೆನೆನುತ್ತ ಸೆರೆಯೊಳ |
ಗಾ ನಿತಂಬೆಯನಿಡಲು ಬಂದನು ಜನಪ ಸಿತಕುವರ || 166 ||

**ಕಂದ ಪದ್ಯ**
ಬಂದಾ ಶ್ವೇತಕುಮಾರಂ |
ನಿಂದಬ್ಬರಿಸಲ್ ಖಳಪತಿ ವಿಸ್ಮಯದಿಂದಂ |
ಚಂದಿರಧರನೋಲ್ ಗಜರುತ |
ಲೆಂದಂ ಬಿಲ್ ಝೇವಡೆಯುತಲಾ ನೃಪನೊಡನಂ || 167 ||

**ಕಾಂಭೋದಿ - ಝಂಪೆ**
ಭಳಿರೆ ಫಡ ನೀನಾರು | ಬಲು ಧೈರ್ಯದಿಂದೆಮ್ಮ |
ಬಳಿ ಬಂದುದೆಂತರ ಚೋದ್ಯ ||
ನಳಿನಸಖನಣುಗನಿಹ | ಹೊಳಲ ತೋರುವೆ ನಿನ್ನ |
ತಲೆಯ ಕಡಿದೀಗ ನಿಮಿಷದಲಿ || 168 ||

ಎನ್ನ ಕೇಳುವೆಯ ಖಳ | ಕುನ್ನಿ ವರ ರುದ್ರಪುರ |
ವನ್ನಾಳ್ದ ಸಿತಕುವರ ನಾನು ||
ಪನ್ನತಿಕೆ ಯಾಕೆ ಮನ | ದನ್ನೆಯನು ಕೊಡು ಸಮರ |
ವನ್ನೆಸಗಲೀಗ ಸಂಹರಿಪೆ || 169 ||

ರುದ್ರಪುರಪತಿಯೆ ಮಮ | ಮುದ್ದು ಭಗಿನಿಯ ಕರವ |
ಛಿದ್ರಿಸಿದ ಪಾಪಾತ್ಮ ನಿನಗೆ ||
ಸುದ್ದಿ ಯಾತಕೆ ಸತಿಯ | ಮದ್ದರೆವೆನೆಂದೆಸಗಿ |
ದುದ್ಧಟತ್ವಕೆ ನರಕುಮಾರ || 170 ||

ಪಥದಿ ಬಂದಡ್ಡೈಸೆ | ಮತಿಗೆಡುಕೆ ದಾನವಿಗೆ |
ಮತವರಿತು ಭಂಗಗೈದಿಹೆನು ||
ಪೃಥ್ವಿಯಲಿ ನಿಮ್ಮಂಥ | ದಿತಿಜರಿರೆ ಭಾರವದು |
ಗತಿಗೆಡಿಸಿ ಸುಖವೀವೆ ಧರೆಗೆ || 171 ||

ಹರಿ ಹರ ಬ್ರಹ್ಮ ಸುರ | ವರ ಮುಖ್ಯರೆನ್ನಿದಿರು |
ಬರಲಂಜುವರು ನಿನ್ನ ಪಾಡೆ ||
ಹರಿಗಿದಿರೆ ಕುರಿಮರಿಯು | ಗರುಡನಿಗೆ ಹರಿ ಸರಿಯೆ |
ಹರಿ ಮೆರೆಯೆ | ಕತ್ತಲೆಯದುಂಟೆ || 172 ||

ಪಿತ್ತವಡರಿದೆ ತಲೆಗೆ | ಧೂರ್ತ ದಾನವ ನಿನಗೆ |
ಕತ್ತರಿಪೆ ಶಿರವ ನೋಡೆನುತ ||
ಪೃಥ್ವಿಪತಿ ಗಿರಿಶರವ | ನೆತ್ತಿ ಬಿಡಲದ ತರಿದ |
ಮತ್ತಾಗ ಖಳನು ವಜ್ರದಲಿ || 173 ||

**ಭೈರವಿ - ಅಷ್ಟ**
ಬಳಿಕತಿಕೋಪದಲಿ | ನೃಪಾಲನು |
ಸಲಿಲ ಕಳಂಬದಲಿ ||
ಖಳನನು ತರಿವೆನೆಂದು | ಕಲಿತನದಲಿ ಬಿಡೆ |
ಗೆಲಿದನು ಮರುತಾಸ್ತ್ರದೀ || 174 ||

ಹಾರದಿರೆಲವೊ ಖೂಳ | ನಿನ್ನಯ ಸತ್ವ |
ವೇರಿತೆ ನೋಳ್ಪ ಛಲ ||
ಸಾರವೆಂದು ಹುಂ | ಕಾರದಿ ತಿಮಿರಾಸ್ತ್ರ |
ಘೋರನೆ ತೆಗೆದೆಸೆದ || 175 ||

ಕಂಡಾಗ ದುರ್ಜಯನು | ಸೂರ್ಯಾಸ್ತ್ರದಿ |
ಖಂಡಿಸಿ ಕೆಡಹಿದನೂ ||
ಚಂಡ ಪರಾಕ್ರಮಿ ಕುಂಡಲಿ ಶರ ಬಿಡ |
ಲಂಡಜನಿಂ ಗೆಲಿದಾ || 176 ||

**ಭಾಮಿನಿ**
ಈ ತೆರದಿ ಸಕಲಾಸ್ತ್ರಗಳ ಖಳ |
ನಾಥ ಗೆಲಿದಾರ್ಭಟಿಸಿ ಪ್ರಳಯದ |
ಭೂತಪತಿಯಂದದಲಿ ಕನಲುತ ದಿವ್ಯ ಶಕ್ತಿಯನು ||
ಶ್ವೇತಕುವರನಿಗೆಸೆಯಲದರುರಿ |
ಗಾತ್ರ ಹಾ ಹಾ ಶಿವೆಯೆ ಹಾಯೆಂ |
ದೋತು ಸ್ಮರಿಸುತ ಭೂಮಿಗೊರಗಿದನೇನನುಸುರುವೆನು || 177 ||

**ಸೌರಾಷ್ಟ್ರ - ತ್ರಿವುಡೆ**
ಇತ್ತಲೀ ತೆರನಾಗೆ ಜೈಮಿನಿ |
ಪತ್ತನದಿ ಯಮರಾಯನೋಲಗ |
ವಿತ್ತು ವಿಭವದೊಳಿರುವ ಸಮಯದಿ | ಸತ್ತ ನೃಪನ || 178 ||

ಜ್ಯೋತಿಯನು ಯಮಭಟರು ತಂದುಪ |
ರೇತಪತಿಯಿದಿರಿನಲಿ ನಿಲಿಸಲಿ |
ಕೀತ ಗೈದಿಹ ಪಾಪ ಪುಣ್ಯದ | ರೀತಿಗಳನು || 179 ||

ಚಿತ್ರಗುಪ್ತನೆ ನೋಡುತೆಲ್ಲವ |
ವಿಸ್ತರದಿ ಪೇಳೆನಲು ಹೇ ಸ |
ರ್ವೋತ್ತಮನೆ ಕೇಳೆನುತಲೀ ತೆರ ಬಿತ್ತರಿಸಿದ || 180 ||

**ಭೈರವಿ - ಝಂಪೆ**
ಇವನು ಭೂಮಿಪನಾಗಿ ಭುವನವನು ಪಾಲಿಸದೆ |
ಶಿವೆಯೆಂಬ ಸತಿಯ ಬಿ | ಟ್ಟವಿಚಾರದಿಂದ || 181 ||

ತ್ರೈಲೋಕಸುಂದರಿಯ | ಮೇಳಕೊದಗುತ ತನ್ನ |
ಭೂಲಲನೆಯನು ಕೊಟ್ಟು | ಕಾಳು ಮಾಡಿಹನು || 182 ||

ಈತ ಗೈದಿಹ ಪಾಪ | ಕೇತರದ ಶಿಕ್ಷೆಯೋ |
ನೀ ತಿಳಿಯದವನಲ್ಲ | ನೀತಿಯೊಂದಿಹುದು || 183 ||

ಸಾವಕಾಲದೊಳಿವನು | ಭಾವ ಶುದ್ಧದಿ ಶಿವೆಯ |
ಭಾವಿಸುತಲಳಿದುದದು | ಜೀವಿತದ ಪುಣ್ಯ || 184 ||

ಯೆನಲು ಕೇಳುತ ಯಮನು | ಜನಪ ನೀನತಿ ಪಾಪಿ |
ನಿನಗೆ ನರಕವೆ ಹೊರತು | ಘನ ಪುಣ್ಯವಿಲ್ಲ || 185 ||

ಆದರಳಿಯುವ ಕಾಲ | ಕಾದರೂ ಶಿವೆಯೆನುತ |
ಲೋದಿರ್ದ ಪುಣ್ಯಫಲ | ದೋದಯಕ್ಕೊಲಿದು || 186 ||

ವರವನೊಂದನು ನಿನಗೆ | ಕರುಣಿಸುವೆ ಬೇಡೆನಲು |
ಕರಗಳೆರಡನು ಮುಗಿದು | ತರಣಿಸುತಗೆಂದ || 187 ||

**ಭಾಮಿನಿ**
ಕರುಣನಿಧಿ ಕೇಳೊಂದು ರಾತ್ರಿಗೆ |
ತರುಣಿಮಣಿ ರಂಭೆಯಳ ಭೋಗವ |
ಕರುಣಿಸಲು ಬೇಕೆನಗೆ ವರವದೆ ಬೇರೆ ಬೇಡೆನಲು ||
ತರಣಿಸುತ ನಸುನಗುತಲಾಗಲಿ |
ಕರದಿವನನವಳಿರುವ ಮನೆಯೊಳ |
ಗಿರಿಸುತುದಯಕೆ ತನ್ನಿರೆನೆ ಭಟರೈದಿದರು ಕೊಂಡು || 188 ||

**ಕಂದ ಪದ್ಯ**
ರಂಭೆಯ ಮನೆಯೊಳಗಿರಿಸುತ |
ಲಂಬುಜಸಖನುದಯಕಾಲಕೊದಗುವೆವೆನುತಂ ||
ಮುಂಬರಿಯಲ್ ತುಸು ಸಮಯದಿ |
ಕುಂಭಪಯೋಧರೆಯು ಕಂಡು ನುಡಿಸಿದಳವನಂ || 189 ||

**ಕೇದಾರಗೌಳ - ಝಂಪೆ**
ಯಾರು ನೀನಿಲ್ಲಿ ಬಂದು | ಕುಳಿತಿರ್ಪ |
ಕಾರಣಗಳೇನದೆಂದು ||
ಬಾರದಿಹ ಪೊಸ ರೀತಿಯ | ಕಂಡೆನವಿ |
ಚಾರಿ ಮರೆತೆಯ ನೀತಿಯ || 190 ||

ನಾರಿಮಣಿ ರಂಭೆ ಕೇಳು | ಯಮನ ವರ |
ಸಾರದಿಂ ಬಂದೆ ತಾಳು ||
ಈ ರಾತ್ರಿ ನಿನ್ನ ಕೂಡಿ | ಸುಖಿಸುವ ವಿ |
ಚಾರವೆನಗಾಯ್ತು ಪ್ರಹುಢೀ || 191 ||

ರುದ್ರಪುರವಾಳುತಿರ್ದ | ಶ್ವೇತಸುತ |
ರುದ್ರಬಲ ಸುಪ್ರಸಿದ್ಧ ||
ಬಿದ್ದಿಹೆನು ನಿನ್ನಾಸೆಗೆ | ಭೋಗವಿ |
ತ್ತುದ್ಧರಿಸು ಸ್ಮರತಾಪಗೇ || 192 ||

ಹುಚ್ಚು ಮಾತಾಡಬೇಡ | ನೃಪನೆ ನಿ |
ನ್ನಿಚ್ಛೆಯಿದು ಸಲ್ಲ ಗಾಢ ||
ಸಚ್ಚರಿತನಲ್ಲ ನೀನು | ಹೊರತು ನರ |
ನುಚ್ಚು ನಿನಗೊಪ್ಪೆ ನಾನು || 193 ||

ರಂಭೆ ನೀನಗೇನು ಮರುಳೇ | ತ್ರೈಲೋಕ |
ವಂ ಬೆರಗುಗೊಳಿಸಬಲ್ಲೆ ||
ಕುಂಬುಕಂಠಿನಿಯೆ ಬರಿದೇ | ನರಪಾಪಿ |
ಯೆಂಬೆಣಿಕೆ ಬಿಡು ಸಾರಿದೆ || 194 ||

ಗರ್ವ ಮಾತುಗಳಾಡಲು | ಸಲ್ಲದೈ |
ಸರ್ವಥಾ ಛಲ ಮಾಡಲು ||
ಬರ್ವಳಲ್ಲವು ಬಯಕೆಗೇ | ನೀ ಬಿಡು ಸು |
ಪರ್ವರೋಲೈಪರೆನಗೆ || 195 ||

ಆದರೆಲೆ ಬಾಲೆ ಯಮನಾ | ವರಕೇನು |
ಹಾದಿಯನು ಕಂಡೆಯವನ ||
ನೀ ಧಿಕ್ಕರಿಸಲು ಕಷ್ಟ | ಆದರಿಂದ |
ಸಾದರದಿ ಪಾಲಿಸಿಷ್ಟ || 196 ||

**ಭೈರವಿ - ಝಂಪೆ**
ಯೆನಲು ಯೋಚಿಸಿ ರಂಭೆ | ಜನಪ ಕೇಳಿನಿತಾದ |
ರೆಣಿಕೆಯೊಂದನು ಪೇಳ್ವೆ | ನನುಕರಿಸು ನೀನು || 197 ||

ಪಂಚಾಕ್ಷರಿಯ ಮಂತ್ರ | ಪಂಚ ಕೋಟಿಯ ಸಂಖ್ಯೆ |
ಪಂಚವದನನ ಧ್ಯಾನ | ವಂಚಿಸದೆ ಮಾಡು || 198 ||

ದೇಹಶುದ್ಧವದಕ್ಕು | ಮೋಹಿಸುವೆನಾಮೇಲೆ |
ನೀ ಹೆದರಬೇಡ ಮನ | ಕಾಹುರವ ನೀಗು || 199 ||

**ಭಾಮಿನಿ**
ಆದರದಕೇನೆನುತ ಶುದ್ಧಿಯೊ |
ಳಾ ದಯಾಕರ ವಿಶ್ವಮೂರ್ತಿಯ |
ಪಾದವನು ಸ್ಮರಿಸಿದನು ಪಂಚಾಕ್ಷರಿಯ ಮಂತ್ರದಲಿ ||
ಆ ದಿವಾಕರನುದಯಗಿರಿಯೊಳ |
ಗಾದುದನು ಕಂಡೊಡನೆ ಯಮ ಭಟ |
ರೈದಿ ಪೊರಡೆನೆ ಕದಲದಿದ್ದನು ಜಪದ ನಿಷ್ಠೆಯಲಿ || 200 ||

**ಮಾರವಿ - ಏಕ**
ಫಡ ಹುಲು ಮನುಜನೆ | ನುಡಿದುದ ಮರೆತೆಯ |
ಸಡಗರವೇ ನಿನಗೆ ||
ವಡೆಯನನುಜ್ಞೆಯ ದೃಢತೆಯ ಕೆಡಿಸುವ |
ಗೊಡವೆಯೆ ನಡೆಯದಿದು || 201 ||

ತಟ್ಟನೆ ಪೊರಟೆ | ಮೊಟ್ಟೆಗೆ ಬಾ ಕ |
ಣ್ಬಿಟ್ಟೀಕ್ಷಿಸುತೇಳು ||
ದಿಟ್ಟತೆ ತೋರ್ದರೆ | ಕಷ್ಟದೊಳುರುಳುವೆ |
ಕಟ್ಟುವೆವೀಕ್ಷಣದಿ || 202 ||

ಕುಂಭೀಪಾಕವ | ನಂಬುವ ಸಮಯದ |
ಸಂಭ್ರಮ ನಿನಗಾಯ್ತು ||
ಜಂಬದ ಮಂತ್ರದ | ಹಂಬಲವೇನದು |
ರಂಭೆಯ ಮಾಯಕವೇ || 203 ||

**ಸೌರಾಷ್ಟ್ರ - ತ್ರಿವುಡೆ**
ಇಂತು ಯಮಭಟರವನ ಜರೆಯ |
ಲ್ಕಂತರದಿ ಕೈಲಾಸಶಿಖರದೊ |
ಳಂತ್ಯವಿಲ್ಲದ ಮಹಿಮ ಗಿರಿಜಾ | ಕಾಂತನರಿದು || 204 ||

ಶುದ್ಧಭಾವದೊಳೆನ್ನ ಸ್ಮರಣೆಯೊ |
ಳಿದ್ದ ಭಕ್ತನ ಬಾಧಿಸುವ ಭಟ |
ರುದ್ಧಟತ್ವವ ನಿಲಿಸದಿರಲಾ | ನಿದ್ದು ಫಲವೇ || 205 ||

ಬಾ ಮಗನೆ ಬಾ ವೀರಭದ್ರನೆ |
ಭೀಮಬಲಸಂಹಾರ ರುದ್ರನೆ |
ಕಾಮಿನೀಮಣಿ ರಂಭೆಯಿಹ ಸುರ | ಧಾಮದೊಳಗೆ || 206 ||

ಯೆನ್ನ ಪಂಚಾಕ್ಷರಿಯ ಮಂತ್ರವ |
ನನ್ಯಮಾನಸವಿರದೆ ಜಪಿಸುವ |
ನನ್ನು ಬಾಧಿಪ ಭಟರ ಗೆಲಿದವ | ನನ್ನು ಕಾಯೊ || 207 ||

ಜನಕ ಬಿಡು ಬಿಡು ಗಣ್ಯವೇ ಬಡ |
ಜುಣುಗುಗಳ ಪಿಡಿದಪ್ಪಳಿಸಿ ಶರ |
ಣನನು ಕಾವೆನೆನುತ್ತಲಾಕ್ಷಣ | ಗಣರು ಸಹಿತ || 208 ||

ಕಾಲಭೈರವನೊಡನೆ ಪೊರಟಾ |
ಕಾಲದೂತರ ಬಳಿಯ ಬಳಸುತ |
ಕಾಲ ಕಾಲನ ತೆರದಿ ರೋಷಕ | ರಾಲನೆಂದ || 209 ||

**ಶಂಕರಾಭರಣ - ಮಟ್ಟೆ**
ಕಾಲನಾಳ್ಗಳ್ಯಾಕೆ ಬರಿದೆ |
ಮೇಲುವರಯುತಿಹಿರಿ ನಮ್ಮ |
ಶೀಲ ಭಕ್ತನನ್ನು ಮುಟ್ಟ | ದೇಳಿ ಸುಮ್ಮನೆ || 210 ||

ಸುಮ್ಮನೇಳ್ವರಲ್ಲ ನಾವು |
ಧರ್ಮಮಯನನುಜ್ಞೆಯೆಮಗೆ |
ಹಮ್ಮಿನಿಂದ ಕುಳಿತುನೊಯಿವ | ದೆಮ್ಮ ಕೆಲಸವು || 211 ||

ಹರನನುಜ್ಞೆಗಿಂತ ಮಿಗಿಲು |
ಹರಹುವವರದಾರು ನೋಳ್ಪ |
ಸರಿಯಿರೆನುತಲೆಚ್ಚ ದಿವ್ಯ | ತರದ ಶಕ್ತಿಯ || 212 ||

**ಭಾಮಿನಿ**
ವೀರಭದ್ರನ ಶಕ್ತಿಯಲಿ ಬಾ |
ಯಾರಿ ಯಮನಾಳುಗಳು ಭಯದಲಿ |
ಸಾರಿ ಜೈಮಿನಿಗರುಹೆ ಕೇಳ್ದಾ ಕಾಲ ಕೋಪದಲಿ ||
ಘೋರ ರೂಪದೊಳೈದಿ ಪಾಶದಿ |
ಧಾರುಣೀಶನನೆಳೆಯಲನುಗೊಳ |
ಲಾರುಭಟಿಸುತ ಕಾಲಭೈರವ ತಡೆದನಾ ಯಮನ || 213 ||

**ಭೈರವಿ - ಏಕ**
ಮುಟ್ಟದಿರೆಲವೋ ಯಮನೆ | ಮನ |
ನಿಷ್ಠೆಯೊಳೆಮ್ಮೊಡೆಯನನೆ ||
ಶಿಷ್ಯನು ಭಜಿಸುತಲಿಹನು | ಹಿಂ |
ಮೆಟ್ಟುತ ನಡೆಯೈ ನೀನು || 214 ||

ಪಾಪಿಯಿವನು ಹುಲು ನರನೂ | ಕುಂ |
ಭೀಪಾಕಕೆ ತಕ್ಕವನು ||
ಕೋಪಿಸಲ್ಯಾತಗೆ ನೀವೂ | ಆ |
ರೋಪವ ತೋರಲು ನಾವು || 215 ||

ಹರನಾಜ್ಞೆಯು ನಮಗಿಹುದೂ | ನೀ |
ನೊರೆದರೆ ಫಲವೇನಹುದು ||
ಶರಣನ ಕಾಯದೆ ಬಿಡೆವೂ | ಮುಂ |
ದ್ವರಿಯಲು ಪೂಡೆವೆನು ದೃಢವು || 216 ||

ಕಡುಗಲಿತನವೆನ್ನೊಡನೆ | ಯಾ |
ಕೊಡೆಯೆನೆ ಬರಲಾ ಮೃಡನೆ ||
ಬಿಡೆನೆಂದೆನುತಲೆ ಹೊಡೆಯೆ | ಮೈ |
ಕೊಡಹುತಲವವಿಂದರಿಯೆ || 217 ||

**ಭೈರವಿ - ಝಂಪೆ**
ವೀರಭದ್ರನು ತಡೆದು | ಮಾರಾಂತು ಪೇಳಿದನು |
ಹಾರಾಡದಿರು ಯಮನೆ | ತೋರು ಸಾಹಸವ || 218 ||

ಬುದ್ಧಿಯಿಲ್ಲವೆ ವೀರ | ಭದ್ರ ನಿನಗ್ಯಾಕೆಮ್ಮ |
ನುದ್ರೇಕಿಸುವೆ ಬರಿದೆ | ಸಿದ್ಧಿಸದು ಫಲವು || 219 ||

ಮುಚ್ಚು ಮುಚ್ಚೈ ಬಾಯ | ಹೆಚ್ಚು ಮಾತಾಡಿದರೆ |
ಕೊಚ್ಚುವೆನು ನಾಲಗೆಯ | ನೆಚ್ಚರದಿ ತೆರಳೊ || 220 ||

ತೆರಳುವೆನು ನೋಡಿವನ | ನರಕಕೆಳೆಯುವೆನೀಗ |
ಮೆರೆವರ್ಯಾರೆನ್ನಾಜ್ಞೆ | ಮರೆದು ಲೋಕದಲಿ || 221 ||

ಪರಶಿವಗು ಮಿಗಿಲೆ ನೀ | ಪರಿಯರಿವೆನೆನಲು ಯಮ |
ನೆರಗೆ ದಂಡವ ನೆಗಹಿ | ತೆರಳಿದನು ಸೋತು || 222 ||

**ವಾರ್ಧಕ**
ಮುಂದೇನನೆಂಬೆನಾ ದಂಡಧರನತಿ ಕೋಪ |
ದಿಂದಲಾ ಶಿವಗಣಗಳೆಲ್ಲರಂ ಗೆಲಿದು ಬ |
ಲ್ಪಿಂದಲಾ ಭೂಪಾಲನಿಗೆ ಪಾಶವಿಕ್ಕಲವನೊಂದೆ ಧ್ಯಾನದೊಳಿರುತಿರೆ ||
ಕಂದರ್ಪಹರನರಿದು ನಂದಿವಾಹನದಿಂದ |
ಬಂದು ಪಾಶವ ಬಿಡಿಸಿ ಬಲು ಭಯಂಕರನಾಗಿ |
ನಿಂದಿರ್ಪ ಕಾಲನಂ ಕಂಡು ಖತಿಗೊಂಡು ಮುಂಕೊಂಡು ಮುನಿದಿಂತೆಂದನು || 223 ||

**ಕಾಂಭೋದಿ - ಝಂಪೆ**
ಭಳಿರೆ ಯಮ ನಿನಗಿಂತು | ತಿಳಿವಿಲ್ಲದಾಯ್ತೆ ಮತಿ |
ಮಲಿನತೆಗೆ ಮನ ಬಂತೆ ಮರುಳೆ ||
ಕಳಕಳಿಸದೊಂದೆ ಮನ | ದೊಳಗೆನ್ನನರ್ಚಿಸುವ |
ಸಲೆ ಭಕ್ತನಿಗೆ ಪಾಶವಿಕ್ಕಿದೆಯೆ ಮುಳಿದು || 224 ||

ವೀರಭದ್ರಾದಿಗಣ | ವಾರವನು ಗೆಲಿದಹಂ |
ಕಾರದೊಳು ನಲಿಯುತಿಹೆಯಲ್ಲ ||
ಮೂರು ಲೋಕಕದಾರು | ಕಾರಣರು ಲಯಕೆಂಬ |
ಸಾರವರಿಯದೆಹೋಯ್ತೆ ನಿನಗೆ || 225 ||

ಕರ್ಮಗೋಲನನುರುಹಿ | ದೆರ್ಮ ತಿಳಿಯದ ನಿನ್ನ |
ಹರ್ಮಗಿದೊ ಶಿಕ್ಷಿಸುವೆನೀಗ ||
ಉರ್ಮಳಿಸಬೇಡೆನುತ | ಲೊರ್ಮೆ ಗರ್ಜಿಸಲರಿದು |
ದರ್ಮಯ್ಯ ಪೊರೆಯೆನುತ ಮಣಿದ || 226 ||

**ಮಧುಮಾಧವಿ - ಏಕ**
ದೇವಾದಿ ದೇವರ ದೇವ ಶಂಕರನೇ |
ಕಾವುದೆನ್ನನು ಭಕ್ತಜನ ವಶಂಕರನೆ || ಪ ||
ವಾಸುಕಿಭೂಷಾ ಕೈಲಾಸಗಿರೀಶ |
ವಾಸವನುತ ಪಾದಪಾವನದೇಶ ||
ಭಾಸುರ ಭಸ್ಮವಿಲೇಪಿತಗಾತ್ರ |
ಭೂಸುರವಂದಿತ ಪಾವಕನೇತ್ರ || ದೇವಾದಿ || 227 ||

ಮತಿಹೀನನಾಗಿ ನಾ ನಿನ್ನಯ ಗಣರಾ |
ಖತಿಯಿಂದ ಗೆಲಿದೋಡಿಸಿದೆ ಕ್ಷಮಿಸಿದರಾ ||
ಪೃಥಿವಿಪಗವಧಿಯು ತೀರಿತೆಂದವಗೆ |
ಗತಿಗೆಡಸಲು ಪಾಶವಿಕ್ಕಿದೆ ಕಡೆಗೇ || ದೇವಾದಿ || || 228 ||

ಅಪರಾಧವಾದರಿಂನದರನ್ನು ಕ್ಷಮಿಸೀ |
ಉಪದೇಶಿಸುವ ತೆರ ನಡೆವೆನು ನಮಿಸಿ ||
ಕೃಪೆ ಮಾಡಬೇಕೆನ್ನ ಮೇಲೆ ಶ್ರೀಶಿವನೆ |
ಸುಫಲದಾಯಕ ವಿಶ್ವರೂಪನೆ ಭವನೆ || ದೇವಾದಿ || 229 ||

**ಭಾಮಿನಿ**
ಇನಿತು ನುತಿಸುವ ಯಮನ ಭಕ್ತಿಗೆ |
ಫಣಿಪಭೂಷಣನೊಲಿದು ಕ್ಷಮಿಸುವೆ |
ಜನಪಗಾಯ್ತಾಯುಷ್ಯವರ್ಧನ ಪೋಗು ನೀನೆನಲು ||
ಮಣಿದು ಗಮಿಸಲು ಯಮನು ಬಳಿಕಾ |
ಮನುಮಥಾರಿಯು ನೃಪನನಪ್ಪುತ |
ಲನಘ ಸಾಕಿನ್ನೇಳು ಮೆಚ್ಚಿದೆನೆನುತಲಿಂತೆಂದ || 230 ||

**ನವರೋಜು - ಏಕ**
ಮೆಚ್ಚಿದೆ ನಾನೆಲೆ ಮಗನೇ | ನೀ |
ನುಚ್ಚರಿಸೀ ಮಂತ್ರವನೇ ||
ಸ್ವಚ್ಛತೆ ಪಡೆದಿಹೆ | ನೆಚ್ಚಿನ ಭಜಕನೆ |
ನಿಚ್ಚಟ ಭಾವವ | ದಚ್ಚರಿ ನಿನ್ನದು || 231 ||

ಹಿಂದಿನ ದೇಹವ ಧರಿಸೀ | ನೀ |
ಮುಂದಿನ್ನು ಸುಖಿವೆರಸೀ ||
ಹೊಂದುತಲರಸಿಯ | ಚಂದದಿ ಬಾಳಾ |
ಮಂದಮತಿಯ ಯಮ | ಮಂದಿರಕಟ್ಟುತ || 232 ||

ರಂಭೆಯ ಭೋಗವದಿಂದು | ನಿನ |
ಗಿಂಬಕ್ಕೂ ಮುಂದೆಂದು ||
ಕುಂಭಿನಿಯಾಳುತ | ಲಂಬುಜಮುಖಿ ಸಹ |
ಸಂಭ್ರಮದೊಳು ನೀ | ನಂಬಿಹುದೆನ್ನನು || 233 ||

ಧರಣಿಯ ಕೀರ್ತಿಯೊಳಾಳಿ | ಹಲ |
ವರುಷವು ಸೌಖ್ಯದಿ ಬಾಳಿ ||
ಬರುವುದು ಮಂಗಲ | ಕರ ಪದವಿಯ ಜಯ |
ಕರುಣಿಪೆನೆನಲವ | ನೆರಗುತಲೆಂದನು || 234 ||

**ಕೇದಾರಗೌಳ - ಅಷ್ಟ**
ಶಂಕರ ಶರಣವ | ಶಂಕರ ವೈರಿಭ |
ಯಂಕರ ಶುಭಕರನೆ ||
ಶಂಕರಿಯರಸ ಸು | ಖಂಕರ ಲಾಲಿಸು |
ಶಂಕೆಯದೊಂದಿಹುದು || 235 ||

ಲೋಕವನಾ ತ್ರೈ | ಲೋಕ ಮನೋಹರಿ |
ಗಾಕೆಯ ಕೂಡುವರೆ ||
ನಾ ಕೊಟ್ಟಿಹೆನವಿ | ವೇಕದೊಳಂದದ |
ಕ್ಯಾಕಿಚ್ಚಿಪುದಿನ್ನು || 236 ||

ಸತ್ಯವ ಮೀರುವ | ದುತ್ತಮವೇ ಸ |
ರ್ವೋತ್ತಮ ನೀ ಪೇಳು ||
ನಿತ್ಯನಿರಂಜನ | ಮತ್ತೇನಿಲ್ಲೆನೆ |
ಚಿತ್ತಜಹರನೆಂದ || 237 ||

ಬಿಡು ಸಂಶಯವನು | ಕೊಡುವಳು ಸರ್ವವ |
ನುಡಿ ಪುಸಿಯಾಗದಿದು ||
ದೃಢದಿಂದೆನ್ನನು ಪೊಡವಿಯೊಳರ್ಚಿಸಿ |
ಪಡೆ ಸತ್ಕೀರ್ತಿಯನು || 238 ||

ಎನುತಲಿ ಕರುಣದಿ | ಮಣಿಮಯ ರಥ ಶರ |
ಧನು ತೂಣೀರಗಳು ||
ಜನಪನಿಗಿತ್ತಾ | ಗನುಪಮ ಗಮಿಸಿದ |
ಘನ ತೆರದೊಳು ಹರಸಿ || 239 ||

**ವಾರ್ಧಕ**
ಚಿತ್ರಜಾರಿಯು ಹರಸುತತ್ತ ಗಮಿಸಲು ನೃಪನಿ |
ಗೆತ್ತಣಿಂದಾಯ್ತೊ ಮುನ್ನಿನ ರೂಪ ಹರಮಹಿಮೆ |
ಚಿತ್ರತರಮಲ್ತೆ ಬಳಿಕಾ ಭೂಪ ರಂಭೆಯಳ ಸಂಭೋಗಮಂ ಗಳಿಸುತ ||
ಮತ್ತವಳ ಸಹಯದಿಂ ದುರ್ಜಯನ ಪುರಕೈದು |
ತುರ್ಥಿಯಿಂ ಬೀಳ್ಕೊಟ್ಟು ಕೋಟೆಯಂ ದಾಟಿ ಮುಂ |
ದೊತ್ತಿ ಬರಲರಿತು ಖಳನಣುಗ ಲೋಹಿತನೇತ್ರನಿದಿರಿಸಿದನಾ ವೀರನ || 240 ||

**ಶಂಕರಾಭರಣ - ಮಟ್ಟೆ**
ಭಳಿರೆ ಶ್ವೇತಕುವರ ಧುರದೊ |
ಳಳಿದ ನೀನು ಬದುಕಿ ಬಂದು |
ಬಲು ಸಮರ್ಥನಾದೆಯಲ್ಲ | ಬಲುಮೆ ಕಾಂಬೆನು || 241 ||

ಏನೆಲಾ ಮದಾಂಧ ಖಳನೆ |
ನೀನದೇನನರಿವೆ ದುಷ್ಟ |
ದಾನವರನು ಕೊಲಲು ಹರನು | ತಾನೆ ಸಲಹಿದ || 242 ||

ಹರನ ವರವೆ ಸಾಕು ಗರ್ವ |
ಮುರಿವೆ ತರಿವೆನೆಂತು ಮುಂದೆ |
ಬರುವೆ ಮೆರೆವೆ ನೋಳ್ಪೆ ಶೌರ್ಯ | ದಿರವನೆಲ್ಲವ || 243 ||

ಲೋಕಭಾರವಾಗಿ ಪುಣ್ಯ |
ಶ್ಲೋಕರನ್ನು ಹಳಿದು ಮುಳಿದು |
ಪೋಕರಾದ ನಿಮಗೆ ಬಾಳ್ವೆ | ಸಾಕು ಕೊಲ್ಲುವೆ || 244 ||

ಕೊಲ್ಲುವವನೆ ನೀನು ನಿಲ್ಲು |
ನಿಲ್ಲೆನುತ್ತಲಸುರನಾಗ |
ಮಲ್ಲತನದೊಳೆಚ್ಚ ಶರವ | ಬಿಲ್ಲಗೇರಿಸಿ || 245 ||

ಬರುವ ಶರವ ಕಡಿದು ಭೂಪ |
ಹರನ ನೆನೆದು ದಿವ್ಯರೋಷ |
ವರುಷ ಸುರಿಸೆ ಬಿದ್ದ ಧರೆಗೆ | ದುರುಳ ದಾನವ || 246 ||

**ಭಾಮಿನಿ**
ವೀರಲೋಹಿತನೇತ್ರ ಸಮರದಿ |
ಸಾರೆ ಯಮನೆಡೆಗಾಗಿ ಬಳಿಕಾ |
ಘೋರ ದೈತ್ಯನ ಸಚಿವ ಶಂಬರನೆಂಬ ದಾನವನು ||
ಮೀರಿ ಬಹ ಸಿತಕುವರನನು ಕಂ |
ಡಾರುಭಟಿಸುತ ಸಿಂಹನಾದದಿ |
ಭೂರಿ ಭುಜಬಲದಿಂದ ತಡದಿಂತೆಂದ ಪಲ್ಗಡಿದು || 247 ||

**ಭೈರವಿ - ಝಂಪೆ**
ಎಲ್ಲಿಗೈದುವೆ ನಿಲ್ಲು | ಹುಲು ಮಾನವನೆ |
ಮಲ್ಲತನದೋರ್ವದೆ | ಮೃಲಿಲ್ಲ ಬಲವಿರಲು || 248 ||

ಹಂದೆ ಖಳದೈತ್ಯ ನಿ | ನ್ನಂದದಸುರನು ಬಿದ್ದು |
ಹೊಂದಿದನು ಯಮಪುರವ | ಕೊಂದೀವೆ ಜೊತೆಗೆ || 249 ||

ಲೋಹಿತಾಕ್ಷನ ಗೆದ್ದ | ಬಾಹುಬಲ ಶೌರ್ಯವೆ |
ಮ್ಮೀ ಹಿರಿಮೆಗೆಣೆಯಹುದೆ | ನೀ ಹೋರು ನೋಳ್ಪೆ || 250 ||

ಪಿಶಿತ ಮಾಂಸಗಳ ಮೆ | ದ್ದೆಸೆಯುವಂತಲ್ಲ ರಣ |
ದೊಸಗೆ ನೀನೇನರಿವೆ | ಯಸುರ ಕಡು ಮೂರ್ಖ || 251 ||

ಹುಲು ನರನೆ ನಿನ್ನಂತ | ಹಲವರೆನ್ನುದರದೊಳು |
ನೆಲೆಯಾದರಿನ್ನು ನೀ | ನುಳಿವ ಪಾಡುಂಟೆ || 252 ||

ಎಂದೆನಲು ಕೋಪದೊಳ | ಗಿಂದ್ರಾಸ್ತ್ರವನು ಬಿಡಲು |
ಮಂದಮತಿಯದನು ಶಚಿ | ಯಿಂದ ಮೋಹಿಸಿದ || 253 ||

ಭೂಪಾಲ ಬಳಿಕ ಫಣಿ | ರೂಪವನು ತೆಗೆದೆಸೆಯ |
ಲಾ ಪಾಪಿ ಯಮಪುರಕೆ | ತಾ ಪಯಣ ಗೈದ || 254 ||

ಕಂಡದನು ದುರ್ಜಯನು | ಖಂಡೆಯವ ಝಳಿಪಿಸುತ |
ಖಂಡಪರಶುವ ರೋಷ | ಗೊಂಡೆಂದ ನೃಪಗೆ || 255 ||

**ಮಾರವಿ - ಏಕ**
ಎಲೆ ಪೋರನೆ ನೀ | ನಳಿದುಳಿದ್ಯೆದುತ |
ಗೆಲಿದೆಯ ನಮ್ಮವರ ||
ಹುಲುನರನೊರಜುವೆ | ಹುಲಿಗೆಣೆಯೇ ಕುರಿ |
ಕೊಲುವೆನು ನಿಮಿಷದಲಿ || 256 ||

ಅಬ್ಬರಿಸದಿರೆಲೊ | ಕರ್ಬುರ ಸಾಕಿ |
ನ್ನುಬ್ಬರಿಸಲು ಬಿಡೆನು ||
ಪೆರ್ಬುಲಿಯಾದರ | ದುರ್ಬುವ ಹರಿಗಿದಿ |
ರಾರ್ಭಟೆಯೇ ಪೇಳೂ || 257 ||

ಬಿಡುಗಣ್ಣರು ಸಹ ನಡುಗುವರೆನ್ನಯ |
ಕಡುಗಲಿತನಕಾಗಿ ||
ಮೃಡ ಬ್ರಹ್ಮಾದ್ಯರ ಬಿಡನೊಮ್ಮೆಗೆ ನೀ |
ಬಡನರನೆನಗೀಡೆ || 258 ||

ಕೆಟ್ಟ ದನುಜ ಮತಿ | ಗೆಟ್ಟರೆ ಪೂಜ್ಯರ |
ದಟ್ಟಿಸಿ ನುಡಿಯದಿರು ||
ಬೆಟ್ಟಕಿರುವೆ ಸರಿ | ಗಟ್ಟುವುದೇ ಮುರಿ |
ದೊಟ್ಟುವೆನೀ ಕ್ಷಣದಿ || 259 ||

ಎನೆ ಕೋಪದೊಳತಿ | ಮಿನುಗುವ ಖಡ್ಗವ |
ದನುಜನು ಝಳಪಿಸಲು ||
ಜನಪತಿಯದರನು | ಗಣಿಸದೆ ಸೆಳೆಯುತ |
ನೆನೆಯುತ | ಶಂಕರನ || 260 ||

**ಭಾಮಿನಿ**
ಧರಣಿಪಾಗ್ರಣಿ ದಿವ್ಯ ಶಕ್ತಿಯ |
ದುರುಳ ಖಳನುರಕೆಸೆಯೆ ಸಹಸದೆ |
ತೆರಳಿದನು ಯಮನವರಕಾಂಬಾತುರದೊಳಾ ಬಳಿಕ ||
ಸೆರೆಯೊಳಿಪ್ಪಾ ಶಿವೆಯ ನೃಪಶೇ |
ಖರನು ಬಿಡಿಸುತಲಧಿಕ ಬಳಲಿಹ |
ವರ ಪತಿವ್ರತೆಗೆಂದ ಕರುಣಾನಂದ ಬಾಷ್ಪದಲಿ || 261 ||

**ಬೇಗಡೆ - ಏಕ**
ಬಾಲೆ ಸದ್ಗುಣಮಾಲೆ ಬಳಲಿದೆಯ | ನೀನೆನ್ನ ವರಿಸಿದ |
ಮೇಲೆ ಕಷ್ಟದ ಪಾಲೆ ಖಳ ಸೆರೆಯ ||
ಬಾಳಲರಿಯದ ಬಂಧನದಿ ನೀ |
ಲಾಳಕಿಯೆ ನೀನುಳಿದು ದೊರಕಿದು |
ದೇಳು ಜನ್ಮದ ಪುಣ್ಯವೆನಗೆ ಮ |
ರಾಳಗಾಮಿನಿ ಮದನಮೋಹಿನಿ || 262 ||

ಪರಮ ಮಂಗಲಕರನು ಪುರಹರನು | ಸಲಹಿರ್ಪನೆನ್ನನು |
ಕರುಣನಿಧಿ ಶಂಕರನ ಮಹಿಮೆಯನು ||
ಸುರಪಮುಖ್ಯರು ತಿಳಿಯರವನನು |
ಮರೆಯದರ್ಚಿಪ ಶರಣರಿಗೆ ಭವ |
ದುರಿತ ಭಯಗಳದುಂಟೆ ಗಿರಿಜಾ |
ವರನ ವಿಶ್ವೇಶ್ವರನ ನೆನೆವುದು || 263 ||

ಮುಂದೆ ನಾವಾನಂದದಿಂ ನಮ್ಮಾ | ರುದ್ರಾಖ್ಯಪುರವನು |
ಹೊಂದಿ ಬಾಳುವದಂದವದು ಧರ್ಮ ||
ಚಂದ್ರಶೇಖರನಾಜ್ಞೆ ಕಡೆಗಾ |
ನಂದಿವಾಹನನೀವ ಮುಕ್ತಿಯ |
ಸುಂದರಾಂಗಿಯೆ ಪೋಪುದೆನಲವ |
ನೊಂದಿಗೆದ್ದಳು ಮಂದಹಾಸದಲಿ || 264 ||

**ವಾರ್ಧಕ**
ಚಿತ್ರವಿಸಿ ಮುನಿವರರು ನೃಪನಿಂತು ಸತಿಸಹಿತ |
ಪತ್ರನವ ಸಾರ್ದು ತ್ರೈಲೋಕಸುಂದರಿಯೊಡನೆ |
ಬಿತ್ತರಿಸಲೆಲ್ಲವಂ ನಿನ್ನಂ ಪರೀಕ್ಷಿಸಿದೆ ಪಿತನಾಜ್ಞೆಯಿಂದೆನ್ನುತ ||
ಸತ್ಯ ಧರ್ಮಕೆ ಮೆಚ್ಚಿ ಸಕಲ ಧಾತ್ರಿಯನವನಿ |
ಗಿತ್ತುಂಗುರವನೀಯೆ ಹಲಕಾಲ ರಾಜ್ಯವಾ |
ಳುತ್ತ ಪುತ್ರನ ಪಡೆದು ಕಟ್ಟಿ ಪಟ್ಟವ ಪತ್ನಿಯೊಡನೆ ಸೇರ್ದನು ಶಿವನನು || 265 ||

**ಸೌರಾಷ್ಟ್ರ - ತ್ರಿವುಡೆ**
ಈ ತೆರದಿ ಶೌನಕರಿಗೊಲಿದಾ |
ಸೂತಪೌರಾಣಿಕನು ಪೇಳ್ದುದ |
ಭೂತಳಾಮರ ವಿಷ್ಣುವರ ಶ್ರೀ | ನಾಥ ಭಜಕ || 266 ||

ಕಿರಿಗಹನ ಬೋಧಕನು ನಾ ಗೈ |
ದಿರುವೆ ನೆರೆಯಪ್ಪಾಡಿ ಕೇಶವ |
ಗುರು ನಿರೂಪಣೆಯಿಂದ ಕಮಲಾ | ಕರನ ದಯದಿ || 267 ||

ಕನ್ನಡದ ಸೇವೆಯಿದೆನ್ನುತಲಿ |
ಕನ್ನಡಿಗರಭಿಮಾನದಿಂದಲಿ |
ಮನ್ನಿಸಿದರಾನ್ ಗೈದುದಕೆ ಸಂ | ಪನ್ನನಾದೆ || 268 ||

**ಮಂಗಲಪದ - ಅಷ್ಟ**

ಮಂಗಲಂ ಜಯ | ಮಂಗಲಂ ಜಯ |
ಮಂಗಲಂ ಶ್ರೀ ರಂಗಗೆ ||
ಮಂಗಲಂ ಜಯ | ಮಂಗಲಂ ಜಯ |
ಮಂಗಲಂ ನೀಲಾಂಗಗೆ || ಅ. ಪ ||
ಕರುಣಾಸಾಗರ | ಶರಣಾಗತರ |
ದುರಿತಭಯಂ ಸಂ | ಹರಣಗೆ ||
ತರಿದು ದುರುಳರ | ಪರಮ ಭಕ್ತರ |
ಪೊರೆವ ಪಾವನ | ಚರಣಗೆ || 269 ||

ಕಮಲನೇತ್ರಗೆ | ವಿಮಲಗಾತ್ರಗೆ |
ದ್ಯುಮಣಿತೇಜಪವಿತ್ರಗೆ ||
ಸುಮನಪಾತ್ರಗೇ | ಶಮನಸೂತ್ರಗೇ |
ನಮಿಪೆ ಶಂಕರಮಿತ್ರಗೆ || 270 ||

ಶೇಷಶಯನ ವಿ | ಲಾಸ ಮಂಜುಳ |
ಹಾಸ ತ್ರೈಜಗದೀಶಗೇ ||
ದೋಷಹರ ವಿ | ಶ್ವೇಶ ಸುರವರ |
ಪೋಷ ಮುನಿಪುರವಾಸಗೇ |
ಮಂಗಲಂ ಜಯ ಮಂಗಲಂ || 271 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ.

**ಮೂಲ ಪ್ರಕಾಶಕರು:** ಎಮ್. ವೆಂಕಟ ರಾವ್, ಶ್ರೀ ನಿತ್ಯಾನಂದ ಗ್ರಂಥಾಲಯ, ಹಂಪನಕಟ್ಟಾ, ಮಂಗಳೂರು

**ಪ್ರಸಂಗ ಪ್ರತಿ ಆಧಾರ:** ಎಮ್. ವೆಂಕಟ ರಾವ್, ಶ್ರೀ ನಿತ್ಯಾನಂದ ಗ್ರಂಥಾಲಯ, ಹಂಪನಕಟ್ಟಾ, ಮಂಗಳೂರು ಪ್ರಕಟಿತ ಶಿವ ಪಂಚಾಕ್ಷರಿ ಮಹಿಮೆ ಯಕ್ಷಗಾನ ಪುಸ್ತಕ

**ಪ್ರಸಂಗ ಪ್ರತಿ ಕೊಟ್ಟವರು:** ಡಾ. ರಾಧಾಕೃಷ್ಣ ಉರಾಳ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಚಂದ್ರ ಆಚಾರ್

**ಅಂತರಜಾಲ ಪ್ರತಿ ಬರವಣಿಗೆ:** ದಿನೇಶ ಉಪ್ಪೂರ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ